ಜನಮನದ ದನಿ

# ಪ್ರಜೋದಯ

ಸಂಪಾದಕ : ಜಿ.ಆರ್. ಕೆಂಚೇಗೌಡ

20 ಜನವರಿ 2026 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 307 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629




ಭಯೋತ್ಪಾದನೆ ಬಗ್ಗೆ ಶೂನ್ಯ ಸಹಿಷ್ಣುತೆ ಪಾಲಿಸ ಬೇಕು ಮತ್ತು ಭಾರತದ ನೆರೆಯ ದೇಶದಲ್ಲಿ ಭಯೋ ತ್ಪಾದಕ ಚಟುವಟಿಕೆಗಳ ಮೂಲಸೌಕರ್ಯದ ಉತ್ತೇಜ ನಕ್ಕೆ ಸಹಾಯ ಮಾಡಬಾರದೆಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಪೋಲೆಂಡ್ ವಿದೇಶಾಂಗ ಸಚಿವ ರಾಡೋಸ್ಲಾವ್ ಸಿಕೋರ್ಸ್ಕಿಗೆ ಸೋಮವಾರ ಹೇಳಿದ್ದಾರೆ.



ಕಲಿತ ಕಳ್ಳ........ » 2



ಸೇವಾ ನ್ಯೂನ್ಯತೆ: ಪುರಸಭಾ ಅಧಿಕಾರಿಗೆ ಡಿ.ಸಿ. ತರಾಟೆ » 3



ಗೌತಮಿ ನಾಯಕ್ ಬ್ಯಾಟಿಂಗ್ ಗುಜರಾತ್‌ಗೆ ಸವಾಲಿನ ಗುರಿ » 4

# ಎಲ್ಲದಕ್ಕೂ ಕಾಲವೇ ಉತ್ತರ ನೀಡುತ್ತೆ

- ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕಿದ್ದಾರೆ
- ದೆಹಲಿಯಿಂದ ವಾಪಾಸ್ಸಾದ ಬಳಿಕ ಡಿ.ಕೆ.ಶಿವಕುಮಾರ್ ಮಾರ್ಮಿಕ ನುಡಿ

ಬೆಂಗಳೂರು: ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ. ನಮ್ಮ ನಡುವೆ ಏನು ಚರ್ಚೆಯಾಗಿದೆ ಎಂದು ನಮಗೆ ಮಾತ್ರ ಗೊತ್ತು. ಇದನ್ನೆಲ್ಲಾ ಸಾರ್ವಜನಿಕವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ದೆಹಲಿಯಿಂದ ವಾಪಾಸ್ಸಾದ ಬಳಿಕ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ 140 ಶಾಸಕರು ನನ್ನ ಬೆಂಬಲಕ್ಕಿದ್ದಾರೆ. ನಾನು ಹಾಗು ಸಿದ್ದರಾಮಯ್ಯ ಅವರು ಏನು ಮಾತನಾಡಿದ್ದೇವೆ ಎಂದು ನಮಗೆ ಗೊತ್ತಿದೆ. ಹೈಕಮಾಂಡ್ ಸಮ್ಮುಖದಲ್ಲಿ ಏನು ಮಾತನಾಡಿದ್ದೇವೆ, ಎಲ್ಲಾ ಕೂತು ಏನು ತೀರ್ಮಾನ ಮಾಡಿದ್ದೇವೆ ಎಂದು ನಮಗೆ ಗೊತ್ತಿದೆ. ಈ ವಿಚಾರವನ್ನು ನಿಮ್ಮ ಮುಂದೆ ಬಹಿರಂಗವಾಗಿ ಚರ್ಚೆ ಮಾಡಲು



ಸಾಧ್ಯವಿಲ್ಲ. ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದು ತಿಳಿಸಿದರು.

ದೆಹಲಿಯಲ್ಲಿ ಎಐಸಿಸಿ ವರಿಷ್ಠರನ್ನು ಭೇಟಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದನ್ನು ನಾನು ಬಹಿರಂಗಪಡಿಸಲ್ಲ. ನಾನೇಕೆ ಅದನ್ನೆಲ್ಲ ಬಹಿರಂಗಪಡಿಸಲಿ. ಒಂದು ಮಾತಿನಲ್ಲಿ ಹೇಳುವುದಾದರೆ, ಕಾಲ ಎಲ್ಲದಕ್ಕೂ ತಕ್ಕ ಉತ್ತರ ನೀಡಲಿದೆ. ನಮ್ಮ ಅನುಕೂಲಕ್ಕೆ ತಕ್ಕಂತೆ ಯಾರನ್ನು ಯಾವಾಗ ಭೇಟಿ ಮಾಡಬೇಕು ಎಂಬುದನ್ನು ನಿರ್ಧರಿಸಿ ಭೇಟಿ ಮಾಡುತ್ತೇವೆ. ಎಲ್ಲರೂ ಅದನ್ನೇ ಮಾಡುತ್ತಾರೆ. ಅದರಲ್ಲಿ ತಪ್ಪೇನೂ ಇಲ್ಲ. ನೀವು ಯಾಕೆ ಅದನ್ನು ದೊಡ್ಡದು ಮಾಡುತ್ತೀರಿ ಎಂದು ಪ್ರಶ್ನಿಸಿದರು.

**ಅಧಿವೇಶನ ಬಳಿಕ ಸಂದೇಶ:**

ಕರ್ನಾಟಕ ಕಾಂಗ್ರೆಸ್ ಸರ್ಕಾರದ ಅಧಿಕಾರ ಹಸ್ತಾಂತರ ಗೊಂದಲ ಬಗೆಹರಿಸುವ ಸಂಬಂಧ ಫೆಬ್ರುವರಿ ಮೊದಲ ವಾರದಲ್ಲಿ ಹೈಕಮಾಂಡ್‌ನಿಂದ ಸಂದೇಶ ಬರಲಿದೆ ಎಂದು ಡಿ.ಕೆ.ಶಿವಕುಮಾರ್ ಬಣ ನಂಬಿದೆ. ಎರಡೂವರೆ ವರ್ಷಗಳ ಹಿಂದೆ ಕೊಟ್ಟ ಮಾತಿನಂತೆ ಅಧಿಕಾರ ಹಂಚಿಕೆ ಬಗ್ಗೆ ಸ್ಪಷ್ಟ ಸಂದೇಶವನ್ನು ಹೊತ್ತು ತರಲೇಬೇಕು ಎಂದು ನವದೆಹಲಿಯಲ್ಲಿ

> **ನಾವೆಲ್ಲ ರಾಜಕಾರಣಿಗಳು, ದೆಹಲಿಗೆ ಹೋಗುವುದೇ ರಾಜಕೀಯ, ಪಕ್ಷ ಹಾಗು ಸರ್ಕಾರದ ಕೆಲಸಗಳಿಗೆ. ಖಂಡಿತವಾಗಿಯೂ ರಾಜಕೀಯ ಮಾಡಿಯೇ ಮಾಡುತ್ತೇವೆ. ನಮ್ಮ ಅನುಕೂಲಕ್ಕೆ ಯಾವಾಗ, ಯಾರನ್ನು ಭೇಟಿ ಮಾಡಬೇಕೋ ಮಾಡುತ್ತೇವೆ. ಈ ಭೇಟಿ ಮಾಹಿತಿಯನ್ನು ನಾನು ಬಹಿರಂಗಪಡಿಸುವುದಿಲ್ಲ. ಪ್ರತಿಯೊಂದಕ್ಕೂ ಕಾಲವೇ ಉತ್ತರ ನೀಡಲಿದೆ**
>
> **- ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ**

ವಾಸ್ತವ್ಯ ಹೂಡಿದ್ದ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಉನ್ನತ ನಾಯಕ ರಾಹುಲ್‌ಗಾಂಧಿ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡುವ ಅಭಿಲಾಷೆ ವ್ಯಕ್ತಪಡಿಸಿದ್ದರು.

ಆದರೆ, ಹೈಕಮಾಂಡ್ ನಾಯಕರ ಭೇಟಿ ಆಗಿಲ್ಲ. ಹೀಗಾಗಿ ಬೆಂಗಳೂರಿಗೆ ವಾಪಾಸ್ಸಾಗಿದ್ದಾರೆ. ಅಸ್ಸಾಂ ಚುನಾವಣೆಗೆ ಪಕ್ಷದ ಹಿರಿಯ ವೀಕ್ಷಕರಾಗಿರುವ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಬೆಳಿಗ್ಗೆ ಗುವಾಹಟಿಗೆ ತೆರಳಲಿದ್ದಾರೆ. ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮತ್ತೆ ನವದೆಹಲಿಗೆ ಬರಲಿದ್ದಾರೆ. ಆಗ ರಾಹುಲ್ ಅವರನ್ನು ಕಂಡು ಮತ್ತೊಮ್ಮೆ ತಮ್ಮ ಮಹದಾಸೆಯನ್ನು ಹೇಳಿಕೊಳ್ಳುವ ಇರಾದೆಯಲ್ಲಿದ್ದಾರೆ.

### ರಾಹುಲ್ ಭೇಟಿಗೆ ಸಿಗದ ಅವಕಾಶ

ಕೆಲ ದಿನಗಳ ಹಿಂದೆಯಷ್ಟೇ ಡಿ.ಕೆ.ಶಿವಕುಮಾರ್ ಅವರು ಮೈಸೂರಿನಲ್ಲಿ ರಾಹುಲ್ ಗಾಂಧಿ ಭೇಟಿಯಾಗಿ ಚರ್ಚಿಸಿದ್ದರು. ಈ ವೇಳೆ ಅವರು ದೆಹಲಿಗೆ ಬಂದು ಭೇಟಿ ಮಾಡುವಂತೆ ಸಲಹೆ ನೀಡಿದ್ದರು. ಅದರಂತೆ ಶುಕ್ರವಾರ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದಲೇ ತೆರಳಿದ್ದರು. ಶುಕ್ರವಾರ ಮಧ್ಯಾಹ್ನ ಅಸ್ಸಾಂ ಚುನಾವಣಾ ಪೂರ್ವಸಿದ್ಧತಾ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಿಂದ ರಾಹುಲ್ ಬೇಗ ನಿರ್ಗಮಿಸಿದ್ದರಿಂದ ಭೇಟಿ ಸಾಧ್ಯವಾಗಿರಲಿಲ್ಲ. ರಾಷ್ಟ್ರೀಯ ನಾಯಕನನ್ನು ಶನಿವಾರ ಭೇಟಿ ಮಾಡುವ ತವಕದಲ್ಲಿದ್ದರು. ಮಾಜಿ ಸಚಿವ ಭೀಮಣ್ಣ ಖಂಡ್ರೆ ಅಂತಿಮ ದರ್ಶನ ಪಡೆಯುವ ಸಂಬಂಧ ಶನಿವಾರ ಮಧ್ಯಾಹ್ನ ಬೀದರ್‌ಗೆ ತೆರಳಿದ್ದರು. ಅಲ್ಲಿಂದ ರಾತ್ರಿಯೇ ನವದೆಹಲಿಗೆ ಬಂದಿದ್ದ ಅವರು ಭಾನುವಾರವಿಡೀ ಶತಪ್ರಯತ್ನ ನಡೆಸಿದರೂ ರಾಹುಲ್ ಭೇಟಿ ಭಾಗ್ಯ ಸಿಗಲಿಲ್ಲ. ಹೀಗಾಗಿ ವಾಪಾಸ್ಸಾಗಿದ್ದಾರೆ.

## ಇಂದು ಬೃಹತ್ ಉಚಿತ ಆರೋಗ್ಯ ತಪಾಸಣೆ



• ಪ್ರಜೋದಯ ವರದಿ

**ಹಾಸನ:** ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಜನ್ಮ ದಿನೋತ್ಸವದ ಅಂಗವಾಗಿ ಮಂಗಳವಾರ ನಗರದ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಹಾಗು ರಕ್ತದಾನ ಶಿಬಿರ ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ ನಡೆಯಲಿದೆ.

ಆದಿ ಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ. ಶಿಬಿರದಲ್ಲಿ ಹೃದ್ರೋಗ, ಮಕ್ಕಳ ರೋಗ, ಮೂತ್ರಪಿಂಡ, ಕಿವಿ, ಮೂಗು, ಗಂಟಲು, ಸ್ತ್ರೀ ಮತ್ತು ಪ್ರಸೂತಿ, ನರರೋಗ, ಮಾನಸಿಕ ಆರೋಗ್ಯ, ಕ್ಯಾನ್ಸರ್ ತಪಾಸಣೆ, ಕಣ್ಣಿನ ತಪಾಸಣೆ, ದಂತ ಚಿಕಿತ್ಸೆ, ಮಧುಮೇಹ, ಚರ್ಮ ರೋಗ ವಿಭಾಗಗಳ ನುರಿತ ತಜ್ಞ ವೈದ್ಯರು ತಪಾಸಣೆ ನಡೆಸಲಿದ್ದಾರೆ.

ದೃಷ್ಟಿದೋಷವುಳ್ಳ ಶಾಲಾ ಮಕ್ಕಳಿಗೆ ಉಚಿತ ಕನ್ನಡಕ ಹಾಗು ಶ್ರವಣ ದೋಷ ಯಂತ್ರ ವಿತರಿಸಲಾಗುವುದು. ಸ್ತ್ರೀಯರಿಗೆ ಬಿಳಿಸೆರಗು, ಬಂಜೆತನ, ಗರ್ಭಕೋಶ ಸಂಬಂಧಿತ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ ನಡೆಲಿದೆ. ಉಚಿತ ಕಿಡ್ನಿ ತಪಾಸಣೆ ಕೂಡ ನಡೆಲಿದೆ. ಶಿಬಿರದ ಹಿನ್ನಲೆ ಸೋಮವಾರ ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಿದ್ಧತೆ ಪರಿಶೀಲನೆ ನಡೆಸಿದರು. ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ ಹಾಜರಿದ್ದರು.

## ಶಿವಲಿಂಗೇಗೌಡ ವಿರುದ್ಧ ಯಾರೇ ಸ್ಪರ್ಧಿಸಿದರೂ ಸೋಲು

### ಜೆಡಿಎಸ್ ಮುಖಂಡರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಶಿಧರ್ ತಿರುಗೇಟು

• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವ ಕೆ.ಎಂ.ಶಿವಲಿಂಗೇಗೌಡ ಅವರ ವಿರುದ್ಧ ಯಾರೇ ಸ್ಪರ್ಧೆ ಮಾಡಿದರೂ ಗೆಲ್ಲುವುದು ಶಿವಲಿಂಗೇಗೌಡ ಅವರೇ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಜಿ.ಬಿ.ಶಶಿಧರ್ ಅವರು ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಣಾವರ ಅಶೋಕ್ ಮತ್ತು ಕೆಲವರು ಶಿವಲಿಂಗೇಗೌಡ ಅವರ ಬಗ್ಗೆ ಏಕವಚನ ಪದ ಬಳಕೆ ಮಾಡಿರುವುದು ಖಂಡನೀಯ. ಯಾರು ಶಿವಲಿಂಗೇಗೌಡ ಅವರ ವಿರುದ್ಧ ಮಾತನಾಡಿದ್ದಾರೋ ಅವರೆಲ್ಲಾ ಹಿಂದೆ ಇದೇ ಶಾಸಕರ ಗರಡಿಯಲ್ಲಿ ಬೆಳೆದವರು, ಅವರಿಂದ ರಾಜಕೀಯ ಕಲಿತು ಹಾಲು, ಮಜ್ಜಿಗೆ ಮಾರುತ್ತಿದ್ದರೆಂದು ಜರಿಯುವುದು ವೃತ್ತಿಗೆ ಮಾಡಿರುವ ಅವಮಾನ ಎಂದರು.

ಅರಸೀಕೆರೆ ಕ್ಷೇತ್ರದ ಇತಿಹಾಸದಲ್ಲಿ



ಅದರಲ್ಲೂ ನೀರಾವರಿ ವಿಚಾರದಲ್ಲಿ ಯಾರೂ ಮಾಡಿರದ ಸಾಧನೆಯನ್ನು ಶಿವಲಿಂಗೇಗೌಡ ಅವರು ಮಾಡಿದ್ದಾರೆ. ಸಾಕಷ್ಟು ಅನುದಾನ ತಂದಿದ್ದಾರೆ. ಅಭಿವೃದ್ಧಿಗೆ ನಿರಂತರ ಶ್ರಮ ಹಾಕುತ್ತಿದ್ದಾರೆ. ಹಿಂದೆ ಜೆಡಿಎಸ್‌ನವರು ಅರಸೀಕೆರೆಗೆ ಎತ್ತಿನಹೊಳೆ ಯೋಜನೆಯಡಿ ನೀರು ಹರಿಯಲು ಸಾಧ್ಯವೇ ಇಲ್ಲ ಎಂದಿದ್ದರು. ಆದರೆ, ಸಣ್ಣ ಭೂ ವಿವಾದ ಮುಗಿದ ಕೂಡಲೇ ತಾಲ್ಲೂಕಿನ 33 ಕೆರೆಗಳನ್ನು ತುಂಬಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದು ತಿರುಗೇಟು ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ ಅವರು ಮಾತನಾಡಿ, ಬಾಣಾವರ ಅಶೋಕ್ ಅವರು ಶಿವಲಿಂಗೇಗೌಡರ ಜೊತೆಯಲ್ಲಿ ಬೆಳೆದವರು, ಅವರಿಗೆ ಎಪಿಎಂಸಿ, ಜಿಲ್ಲಾ ಪಂಚಾಯಿತಿ ಸ್ಥಾನ ನೀಡಿದ್ದು ಇದೇ ಶಿವಲಿಂಗೇಗೌಡ ಅವರು. ಅವರಿಂದಲೇ ಬೆಳೆದು ಏಕವಚನ ಬಳಕೆ ಮಾಡುವುದು ತರವಲ್ಲ, 553 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನೀರು ತಂದಿದ್ದಾರೆ. ನನಗೆ ಹೇಗೆ ವಿಧಾನ ಪರಿಷತ್‌ಗೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ತಪ್ಪಿತೋ ಅದೇ ರೀತಿ ಬಾಣಾವರ ಅಶೋಕ್ ಅವರಿಗೂ ಕೂಡ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ತಪ್ಪಿರುವುದನ್ನು ಅರಿತುಕೊಳ್ಳಬೇಕೆಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೆಟ್ರೋ ಬಾಬು ಮಾತನಾಡಿ, ಯಾರೇ ವ್ಯಕ್ತಿಗತ ಟೀಕೆ, ವೃತ್ತಿಗೆ ಅವಮಾನ

» ನಾಲ್ಕನೇ ಪುಟದಲ್ಲಿ

## ಅಖಾಡಕ್ಕಿಳಿದ ದಳಪತಿಗಳು: ಜಿಲ್ಲಾ ಜೆಡಿಎಸ್‌ನಲ್ಲಿ ಚೈತನ್ಯ

### ಹೆಚ್.ಡಿ.ರೇವಣ್ಣ ಕ್ಷೇತ್ರ ಸಂಚಾರ: ಕಾರ್ಯಕರ್ತರು- ಮುಖಂಡರಲ್ಲಿ ಉತ್ಸಾಹ

• ಪ್ರಜೋದಯ ವರದಿ

**ಹಾಸನ :** ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮೂರು ಕ್ಷೇತ್ರ, ಲೋಕಸಭೆ ಚುನಾವಣೆಯಲ್ಲಿ ಹಾಸನ ಕ್ಷೇತ್ರವನ್ನು ಕಳೆದುಕೊಂಡು, ಪ್ರಜ್ವಲ್ ಪ್ರಕರಣದಿಂದ ಮುಜುಗರಕ್ಕೊಳಗಾಗಿ ಮಂಕಾಗಿದ್ದ ಜೆಡಿಎಸ್ ಕಾರ್ಯಕರ್ತರು, ಮುಖಂಡರಲ್ಲಿ ಇದೀಗ ಹೊಸ ಚೈತನ್ಯ ಮೂಡಿದೆ.

ಜಿಲ್ಲೆಯಲ್ಲಿ ಪುನಃ ಜೆಡಿಎಸ್ ಪಕ್ಷವನ್ನು ಬಲಗೊಳಿಸಲು ಪಕ್ಷದ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಸ್ವತಃ ಅಖಾಡಕ್ಕಿಳಿದು ಡಿ.29 ರಂದು ಜಿಲ್ಲಾ ಮಟ್ಟದ ಪಕ್ಷದ ಕಾರ್ಯಕರ್ತರ ಸಭೆ ನಡೆಸಿ, ಕಾಂಗ್ರೆಸ್‌ಗೆ ತಿರುಗೇಟು ನೀಡಲು ಜ.24 ರಂದು ಹಾಸನದಲ್ಲಿ ಬೃಹತ್ ಜೆಡಿಎಸ್ ಸಮಾವೇಶ ನಡೆಸುವುದಾಗಿ ಘೋಷಿಸುತ್ತಿದ್ದಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಪುಟಿದೆದ್ದಿದ್ದಾರೆ.

ಈಗಾಗಲೇ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಜಿಲ್ಲೆಯ 8 ತಾಲ್ಲೂಕಿನಲ್ಲೂ ಸಂಚಾರ ಮಾಡಿ, ಜೆಡಿಎಸ್ ಕಾರ್ಯಕರ್ತರ ಸಭೆ ನಡೆಸಿ, ತಮ್ಮ ವಿರೋಧಿಗಳಿಗೆ ಟಕ್ಕರ್ ನೀಡುವ ಮೂಲಕ ಕ್ಷೇತ್ರ ಸಂಚಾರ ಮಾಡಿರುವುದರಿಂದ ಮಂಕಾಗಿದ್ದ ಪಕ್ಷದ ಬೆಂಬಲಿಗರು, ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿದೆ. ಮಾಜಿ ಸಂಸದ ಪ್ರಜ್ವಲ್ ಪ್ರಕರಣದಿಂದ ಮುಜುಗರ, ತಮ್ಮ ಮೇಲಿನ ಆರೋಪಗಳಿಂದ ಕುಗ್ಗಿ ಹೋಗಿದ್ದ ಹೆಚ್.ಡಿ.ರೇವಣ್ಣ ಅವರು ಹಿಂದಿನ ಘಟನೆಗಳನ್ನೆಲ್ಲಾ ಬದಿಗಿಟ್ಟು ಪ್ರತಿ ತಾಲ್ಲೂಕಿಗೂ ಭೇಟಿ ನೀಡಿ, ಪಕ್ಷದ ಮುಖಂಡರೊಂದಿಗೆ ಮುಖಾಮುಖಿ ಚರ್ಚಿಸಿ ಜೆಡಿಎಸ್ ಸಮಾವೇಶಕ್ಕೆ ಎಲ್ಲರನ್ನು ಸಜ್ಜುಗೊಳಿಸಿದ್ದಾರೆ.

**ಪ್ರಮುಖಾಂಶ:-**

- ಜ.24ರಂದು ಜೆಡಿಎಸ್ ಬೆಳ್ಳಿ ಹಬ್ಬದ ಜನತಾ ಸಮಾವೇಶ
- ನಗರದ ಬಿಜಿಎಸ್‌ಕೆ ವಸತಿ ಬಡಾವಣೆಯಲ್ಲಿ ಆಯೋಜನೆ
- ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಪ್ರಕಟ



ಒಂದೂವರೆ ವರ್ಷಗಳ ಕಾಲ ರೇವಣ್ಣ ಅವರು ಕಹಿ ಘಟನೆಗಳಿಂದ ಸಾರ್ವಜನಿಕವಾಗಿ ಅಷ್ಟಾಗಿ ಕಾಣಿಸಿಕೊಳ್ಳದೆ ಇದ್ದರಿಂದ ಪಕ್ಷದ ಕಾರ್ಯಕರ್ತರು, ಮುಖಂಡರು, ಬೆಂಬಲಿಗರು ಕೂಡ ತಮ್ಮಷ್ಟಕ್ಕೆ ತಾವಿದ್ದರು. ಇದೀಗ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡರ ಕರೆಗೆ ಓಗೊಟ್ಟು ರೇವಣ್ಣ ಅವರು ಮೊದಲಿನಂತೆ ಅಖಾಡಕ್ಕಿಳಿದು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರುವುದರಿಂದ ಪಕ್ಷದ ಮುಖಂಡರು ಕೂಡ ಮೈಕೊಡವಿ ಜಿಲ್ಲೆಯಲ್ಲಿ ಮತ್ತೆ ಜೆಡಿಎಸ್ ಪಕ್ಷವನ್ನು ಬಲಗೊಳಿಸಲು ಸಜ್ಜಾಗಿದ್ದಾರೆ. ಜ.24ರಂದು ನಡೆಯುವ ಜೆಡಿಎಸ್ ಬೃಹತ್ ಸಮಾವೇಶದ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದಾರೆ. (ನಾಲ್ಕನೇ ಪುಟದಲ್ಲಿ)

> **ಇದೇ ಮೊದಲನೇ ಬಾರಿ ಜೆಡಿಎಸ್ ಬೆಳ್ಳಿಹಬ್ಬದ ಜನತಾ ಸಮಾವೇಶ ನನ್ನ ಸ್ವಂತ ಜಿಲ್ಲೆಯಾದ ಹಾಸನದಲ್ಲಿ ಜ.24ರಂದು ನಡೆಯುತ್ತಿದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಸಮಾವೇಶಕ್ಕೆ ಪಕ್ಷದ ಎಲ್ಲಾ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರಿಗೆ, ಪ್ರೀತಿಯ ಕಾರ್ಯಕರ್ತರಿಗೆ ಸ್ವಾಗತ ಕೋರುತ್ತೇನೆ.**
>
> **-ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ**

> **ಜಾತ್ಯಾತೀತ ಜನತಾ ದಳ 25 ವರ್ಷಗಳ ಬೆಳ್ಳಿ ಹಬ್ಬ ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಹಾಸನ ನಗರದಲ್ಲಿ ಜ.24 ರಂದು ಬೃಹತ್ ಸಮಾವೇಶವನ್ನು ದೇವೇಗೌಡರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ನಾನು ಸೇರಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಪಕ್ಷದ ಶಾಸಕರು, ಮಾಜಿ ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ. ನಿಮ್ಮಗಳ ಧ್ವನಿಯಾಗಿ ಜೆಡಿಎಸ್‌ನ ಮುಂದಿನ ಹೋರಾಟಕ್ಕೆ ಶಕ್ತಿ ಮತ್ತು ಆಶೀರ್ವಾದ ಮಾಡಬೇಕು.**
>
> **-ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ**

## ಪ್ರವೇಶ ಪತ್ರ ನಿರಾಕರಣೆ: ವಿದ್ಯಾರ್ಥಿಗಳ ಪ್ರತಿಭಟನೆ

### ಪರೀಕ್ಷೆಗೆ ಯಾವುದೇ ತೊಂದರೆ ಇಲ್ಲ: ಪ್ರಾಂಶುಪಾಲ ಥಾಮಸ್ ಸ್ಪಷ್ಟನೆ

• ಪ್ರಜೋದಯ ವರದಿ

**ಹಾಸನ:** ಕಾನೂನು ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರ ನೀಡಿದೇ ಇರುವುದನ್ನು ಖಂಡಿಸಿ ನಗರದ ಸರ್ಕಾರಿ ಕಾನೂನು ಕಾಲೇಜು ವಿದ್ಯಾರ್ಥಿಗಳು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದ ವಿದ್ಯಾರ್ಥಿಗಳು, ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವಂತೆ ಮನವಿ ಸಲ್ಲಿಸಿದರು. ಈ ವೇಳೆ ವಿದ್ಯಾರ್ಥಿ ಕಾಂತರಾಜ್ ಮಾತನಾಡಿ, ನಾವು ನಗರದ ಸರ್ಕಾರಿ ಕಾನೂನು ಕಾಲೇಜಿನ 4ನೇ ವರ್ಷದ ಸೆಮಿಸ್ಟರ್‌ನ ಪರೀಕ್ಷೆಗಳನ್ನು ವಿದ್ಯಾರ್ಥಿಗಳಾಗಿದ್ದು, ನಾವುಗಳು ಪರೀಕ್ಷೆ ಬರೆಯಲು



ನಮ್ಮನ್ನು ಕಾಲೇಜು ಆಡಳಿತ ಮಂಡಳಿ ತಡೆಹಿಡಿದಿದ್ದಾರೆ. ನಾವೆಲ್ಲರೂ ಕಾಲೇಜು ಪ್ರವೇಶ ಮತ್ತು ಪರೀಕ್ಷಾ ಶುಲ್ಕವನ್ನು ಸರಿಯಾದ ಸಮಯಕ್ಕೆ ಪಾವತಿಸಿದ್ದೇವೆ. ಆದರೂ ನಮ್ಮಗಳ ಪ್ರವೇಶ ಪತ್ರವನ್ನು ನೀಡದೇ ನಮ್ಮಗಳ ಶೈಕ್ಷಣಿಕ ವರ್ಷದ ಭವಿಷ್ಯದಲ್ಲಿ ಆಟವಾಡಿರುವುದು ಖಂಡನೀಯ.

ಜ.19 ರಂದು ಕೆಲವು ವಿದ್ಯಾರ್ಥಿಗಳಿಗೆ ಸಂವಿಧಾನ -1 ಪರೀಕ್ಷೆ ಇದ್ದು ವಿದ್ಯಾರ್ಥಿಗಳಿಗೆ ಕಾಲೇಜು, ಬಿಸಿಐ (ಬಾರ್ ಕೌನ್ಸಿಲ್ ಆಫ್ ಇಂಡಿಯಾ) ಮತ್ತು ಹುಬ್ಬಳ್ಳಿ ವಿಶ್ವವಿದ್ಯಾಲಯ ಬೇಜವಾಬ್ದಾರಿ ತನದಿಂದ ಪರೀಕ್ಷಾ ಪ್ರವೇಶ ಪತ್ರ ನೀಡದೇ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಿಲ್ಲ. ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯುವುದರಿಂದ ಅವಕಾಶ ವಂಚಿತರನ್ನಾಗಿ ಮಾಡಿದ್ದು, ಈ ಕುರಿತು ಕಾಲೇಜು, ಬಿಸಿಐ(ಬಾರ್ ಕೌನ್ಸಿಲ್ ಆಫ್ ಇಂಡಿಯಾ) ಮತ್ತು ಹುಬ್ಬಳ್ಳಿ ವಿಶ್ವವಿದ್ಯಾಲಯದಲ್ಲಾಗಿರುವ ಅವ್ಯವಹಾರಗಳ ಕುರಿತು ತೀವ್ರ ತನಿಖೆ ಮಾಡಬೇಕಾಗಿ ಒತ್ತಾಯಿಸಿದರು.

ಜ.20 ರಿಂದ ನಾಲ್ಕನೇ ವರ್ಷದ 7ನೇ ಸೆಮಿಸ್ಟರ್‌ನ ಪರೀಕ್ಷೆಗಳು ಆರಂಭವಾಗಲಿದೆ. ಒಂದು ವೇಳೆ ನಮಗೆ ಮುಂದಿನ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡದಿದ್ದರೆ, 23 ವಿದ್ಯಾರ್ಥಿಗಳ ನಾಲ್ಕನೇ ವರ್ಷದ

» ನಾಲ್ಕನೇ ಪುಟದಲ್ಲಿ

## ಇಂದು ಕೋರೆಂಗಾವ್ ವಿಜಯೋತ್ಸವ

• ಪ್ರಜೋದಯ ವರದಿ

**ಹಾಸನ:** ಭೀಮಾ ಕೋರೆಂಗಾವ್ ವಿಜಯೋತ್ಸವವನ್ನು ಇದೇ ಮೊದಲ ಬಾರಿಗೆ ನಗರದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಅಂಬೇಡ್ಕರ್ ಅವರ ಮೊಮ್ಮಗ ಡಾ.ಭೀಮ್‌ರಾವ್ ಅಂಬೇಡ್ಕರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ ನಗರದ ರೈಲ್ವೆ ನಿಲ್ದಾಣದಿಂದ ಎನ್.ಆರ್.ವೃತ್ತದವರೆಗೆ ಕೋರೆಂಗಾವ್ ವಿಜಯೋತ್ಸವ ಸ್ತಂಭದ ಪ್ರತಿಕೃತಿಯ ಭವ್ಯ ಮೆರವಣಿಗೆ ನಡೆಯಲಿದೆ. ಬಳಿಕ ಪ್ರಜಾಸೌಧದ ಪಕ್ಕದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

## ಎವಿಕೆ ಕಾಲೇಜು ಗೊಂದಲಕ್ಕೆ ತೆರೆ: ಹಳೆ ತಂಡ ಮುಂದುವರಿಕೆ

• ಪ್ರಜೋದಯ ವರದಿ

**ಹಾಸನ:** ನಗರದ ಎವಿಕೆ ಕಾಲೇಜಿನಲ್ಲಿ ಉಂಟಾಗಿದ್ದ ಆಡಳಿತಾತ್ಮಕ ಗೊಂದಲದಿಂದ ಪೋಷಕರು ಹಾಗು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ಹಿನ್ನಲೆ ಈ ಹಿಂದೆ ಇದ್ದ ಪ್ರಾಂಶುಪಾಲ ಚಂದ್ರಶೇಖರ್ ನೇತೃತ್ವದ ತಂಡವನ್ನೇ ಮುಂದುವರೆಸಲು ತೀರ್ಮಾನಿಸಲಾಗಿದೆ.

ಈ ಹಿಂದೆ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಹಾಗು ಉಪನ್ಯಾಸಕರನ್ನು ತೆಗೆದು ಹಾಕಿ, ಹೊಸ ತಂಡವನ್ನು ನೇಮಕ ಮಾಡಿಕೊಂಡಿದ್ದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗುತ್ತಿತ್ತು. ಇದೀಗ ಕಳೆದ ಎರಡು ದಿನಗಳಿಂದ ನಡೆಯುತ್ತಿದ್ದ



ವಿವಾದಕ್ಕೆ ತೆರೆ ಬಿದ್ದಿದೆ.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಾಗಿರುವ ಎವಿಕೆ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಂಶುಪಾಲ ಚಂದ್ರಶೇಖರ್ ಹಾಗು 12ಕ್ಕೂ ಹೆಚ್ಚು ಉಪನ್ಯಾಸಕರನ್ನು ಆಡಳತ ಮಂಡಳಿ ಏಕಾಏಕಿ ಬದಲಾವಣೆ ಮಾಡಿದ್ದರಿಂದ ವಿದ್ಯಾರ್ಥಿಗಳು, ಪೋಷಕರು ಹಾಗು ಉಪನ್ಯಾಸಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಸೋಮವಾರ ಕಾಲೇಜಿನ ಆಡಳಿತ ಮಂಡಳಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಹಾಗು ಉಪನ್ಯಾಸಕರನ್ನೇ ಮುಂದುವರಿಸಲು ತೀರ್ಮಾನ ಕೈಗೊಂಡಿದೆ. ಆಡಳಿತ ಮಂಡಳಿಯ

» ಮೂರನೇ ಪುಟದಲ್ಲಿ

## ಎಂಟಿಇಎಸ್: ಜಿಲ್ಲಾ ನ್ಯಾಯಾಲಯ ಆದೇಶಕ್ಕೆ ಹೈಕೋರ್ಟ್ ತಡೆ

ಹಾಸನ: ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಆಡಳಿತ ಮಂಡಳಿ ಹಗ್ಗಜಗ್ಗಾಟ ಮುಂದುವರೆದಿದ್ದು ಆಡಳಿತ ಕಾರ್ಯ ನಿರ್ವಹಣೆಗೆ ಅಡ್ಡಿಯುಂಟು ಮಾಡದಂತೆ ಈ ಹಿಂದೆ ಜಿಲ್ಲಾ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ಸೋಮವಾರ ಹೈಕೋರ್ಟ್ ತಡೆ ನೀಡಿದೆ.

ಜಿಲ್ಲಾ ನ್ಯಾಯಾಲಯ ಜ.14ರಂದು ನೀಡಿದ್ದ ಆದೇಶ ಪ್ರಶ್ನಿಸಿ ನಿರ್ದೇಶಕರಾದ ಬಿ.ಆರ್.ಗುರುದೇವ್, ಜಿ.ಟಿ.ಕುಮಾರ್ ಹಾಗು ಡಾ.ಅವರವಿಂದ್ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರ ಪೀಠ, ಮುಂದಿನ ವಿಚಾರಣೆವರೆಗೂ ಆಡಳಿತ ಮಂಡಳಿ ಯಾವುದೇ ಸಭೆ ನಡೆಸುವಂತಿಲ್ಲ ಹಾಗು ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳಬಾರದು. ಜ.30ರಂದು ಅಂತಿಮ ವಿಚಾರಣೆ ನಡೆಯಲಿದ್ದು ಆವರೆಗೂ ಈ ಹಿಂದಿನ ಆದೇಶವನ್ನೇ ಪಾಲಿಸುವಂತೆ ಆದೇಶಿಸಿದ್ದರಿಂದ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರ ತಂಡಕ್ಕೆ ಈಗ ಹಿನ್ನಡೆಯಾಗಿದೆ.

### ಶಾಶ್ವತ ಹೋರಾಟ ಸಮಿತಿ ರಚನೆ, ಆನೆಧಾಮ ನಿರ್ಮಾಣಕ್ಕೆ ಒತ್ತಾಯ | ಬಜೆಟ್‌ನಲ್ಲಿ ಹಣ ಮೀಸಲಿಡಲು ಮುಖ್ಯಮಂತ್ರಿ ಭೇಟಿಗೆ ತೀರ್ಮಾನ

## ಕಾಡಾನೆ-ಮಾನವ ಸಂಘರ್ಷ: 3 ಜಿಲ್ಲೆ ಒಳಗೊಂಡು ಮಹತ್ವದ ಸಭೆ

• ಪ್ರಜೋದಯ ವರದಿ

**ಹಾಸನ:** ಕಾಡಾನೆ-ಮಾನವ ಸಂಘರ್ಷಕ್ಕೆ ತಡೆಯೊಡ್ಡಲು ದೀರ್ಘಕಾಲಿಕ ಹಾಗು ವೈಜ್ಞಾನಿಕ ಪರಿಹಾರ ಕಂಡುಕೊಳ್ಳಲು ಶ್ರೀಲಂಕಾ ಮಾದರಿ ಆನೆಧಾಮ, ಶಾಶ್ವತ ಹೋರಾಟ ಸಮಿತಿ ರಚನೆ ಮಾಡುವ ಅಗತ್ಯತೆಯ ಬಗ್ಗೆ ಕಾಡಾನೆ ಪೀಡಿತ ಮೂರು ಜಿಲ್ಲೆಗಳ ಜನಪ್ರತಿನಿಧಿಗಳು, ಹೋರಾಟಗಾರರು, ಕಾಫಿ ಬೆಳೆಗಾರರು, ಪರಿಸರವಾದಿಗಳು ಮಹತ್ವದ ಸಭೆ ನಡೆಸಿ ತೀರ್ಮಾನ ಕೈಗೊಂಡರು.

ನಗರದ ರೆಡ್‌ಕ್ರಾಸ್ ಭವನದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಯನ್ನೊಳಗೊಂಡ ಸರ್ವಪಕ್ಷಗಳ ಜನಪ್ರತಿನಿಧಿಗಳು, ಮುಖಂಡರು, ಪರಿಸರ ಪ್ರೇಮಿಗಳು, ಹೋರಾಟಗಾರರು ಹಾಗು ವಿವಿಧ ಸಂಘಟನೆಗಳ ಪ್ರಮುಖರು ಈ ತೀರ್ಮಾನಕ್ಕೆ ಸಹಮತ ಸೂಚಿಸಿದರು.

ಕಾಡಾನೆ ಸಮಸ್ಯೆ ನಿವಾರಣೆಗೆ ಎಲ್ಲರನ್ನು ಒಳಗೊಂಡ ಒಂದು ಶಾಶ್ವತ ಹೋರಾಟ ಸಮಿತಿ ರಚನೆಯಾಗಬೇಕು. ಈ ಬಗ್ಗೆ ಫೆ.28 ರಂದು ಉಪ ಮುಖ್ಯಮಂತ್ರಿ ಡಿ.ಕೆ.



ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ಶ್ರೀಲಂಕಾ ಮಾದರಿ ಆನೆಧಾಮ ನಿರ್ಮಾಣಕ್ಕೆ ಒತ್ತಾಯಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಾತನಾಡಿ, ಕೇವಲ ಸಭೆ ನಡೆಸಿ ಮುಗಿಸುವುದಲ್ಲ, ಇದಕ್ಕೆ ತಾರ್ಕಿಕ ಅಂತ್ಯ ಕಾಣಿಸುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಶ್ರೀಲಂಕಾ ಮಾದರಿಯಲ್ಲಿ ಆನೆಧಾಮ ನಿರ್ಮಾಣ ಸಾಧ್ಯವಿದೆ. ಅದಕ್ಕೆ ಕನಿಷ್ಠ 300 ಕೋ.ರೂ. ಅಗತ್ಯವಿದೆ. ಮುಂಬರುವ ಬಜೆಟ್‌ನಲ್ಲಿ ಹಣ ಮೀಸಲಿಡುವಂತೆ ಮುಖ್ಯಮಂತ್ರಿ ಮೇಲೆ ಒತ್ತಡ ತರಬೇಕು. ಅದಕ್ಕಾಗಿ ಎಲ್ಲರೂ ಒಗ್ಗಟ್ಟಿನಿಂದ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸೋಣ. ಕಾಡಾನೆ ಸಮಸ್ಯೆ ಇಂದು-ನಿನ್ನೆದ್ದಲ್ಲ, ಹಲವು ದಶಕಗಳಿಂದ ಮಲೆನಾಡು ಹಾಗು ಅರಮಲೆನಾಡು ಭಾಗದ ಜನರು ಜೀವಭಯದಲ್ಲಿ ಬದುಕುತ್ತಿದ್ದಾರೆ. ಹೋರಾಟಗಳು ನಡೆದರೂ ಸರ್ಕಾರ ಕಣ್ಣೊರೆಸುವ ನೀತಿ ಅನುಸರಿಸಿದೆ. ಈಗ ಶಾಶ್ವತ ಪರಿಹಾರದ ಅವಶ್ಯಕತೆ ಹೆಚ್ಚಿರುವುದರಿಂದ ತಕ್ಷಣವೇ ಮುಖ್ಯಮಂತ್ರಿ ಭೇಟಿ ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಪ್ರಸ್ತಾವನೆ ಸಲ್ಲಿಸಬೇಕೆಂದು ಹೇಳಿದರು.

> **ಬೇಲೂರು, ಅರೇಹಳ್ಳಿ, ಬಿಕ್ಕೋಡು, ಮೂಡಿಗೆರೆ, ಭಾಗಗಳಲ್ಲಿ ಕಾಡಾನೆ ಸಮಸ್ಯೆ ತೀವ್ರಗೊಂಡಿದೆ. ಕಾಫಿ ಬೆಳೆಗಾರರು ಹಾಗು ಸಾರ್ವಜನಿಕರು ಸಂಕಷ್ಟದಲ್ಲಿದ್ದಾರೆ. ಕಾಡಾನೆಗಳು ನಾಡಿಗೆ ನುಗ್ಗುವುದನ್ನು ತಡೆಯುವ ಜೊತೆಗೆ ಆನೆಧಾಮ ನಿರ್ಮಾಣದ ಮೂಲಕ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಬೇಕು.**
>
> **-ಹೆಚ್.ಕೆ.ಸುರೇಶ್, ಬೇಲೂರು ಶಾಸಕ**

### ಜನಪ್ರತಿನಿಧಿಗಳ ಒಗ್ಗಟ್ಟಿನಿಂದ ಹೋರಾಟ

**ಜಿಲ್ಲೆಯಲ್ಲಿ ಆನೆಧಾಮ ನಿರ್ಮಾಣಕ್ಕೆ ಸೂಕ್ತ ಸ್ಥಳಗಳಿವೆ. ನೀರು, ಆಹಾರ ಹಾಗು ಅಗತ್ಯ ಸೌಕರ್ಯ ಒದಗಿಸಲು ಅನುಕೂಲಕರ ವಾತಾವರಣವೂ ಇದೆ. ಆದರೆ, ಅದನ್ನು ಅನುಷ್ಠಾನಗೊಳಿಸುವ ಇಚ್ಛಾಶಕ್ತಿ ಯಾವ ಸರ್ಕಾರಕ್ಕೂ ಇಲ್ಲ. ಆದ್ದರಿಂದ 3 ಜಿಲ್ಲೆಗಳ ಜನಪ್ರತಿನಿಧಿಗಳು ಒಗ್ಗಟ್ಟಿನಿಂದ ಸರ್ಕಾರದ ಮೇಲೆ ಒತ್ತಡ ಹೇರಿ, ಶಾಶ್ವತ ಪರಿಹಾರ ದೊರೆಯುವವರೆಗೂ ಹೋರಾಟ ನಿಲ್ಲಿಸಬಾರದೆಂದು ಸಿಮೆಂಟ್ ಮಂಜು ಅವರು ಸಲಹೆ ನೀಡಿದರು.**

**ಸರ್ಕಾರಗಳಿಗೆ ಇಚ್ಛಾಶಕ್ತಿ ಕೊರತೆ**

ಶಾಸಕ ಸಿಮೆಂಟ್ ಮಂಜು, ಇಲ್ಲಿಯವರೆಗೆ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳ ಇಚ್ಛಾಶಕ್ತಿ ಕೊರತೆಯಿಂದಲೇ ಕಾಡಾನೆ ಸಮಸ್ಯೆ ಇಷ್ಟು ಗಂಭೀರ ಸ್ವರೂಪ ಪಡೆದುಕೊಂಡಿದೆ. ಪ್ರತಿ ವರ್ಷ ಹಲವು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆದರೆ, ಶಾಶ್ವತ ಪರಿಹಾರ ಮಾತ್ರ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯದಿದ್ದರೆ ಭಾರೀ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

## ಇಂದಿನಿಂದ ಸರ್ಕಾರಿ ನೌಕರರ ಕ್ರೀಡಾಕೂಟ

**ಹಾಸನ:** ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಮಂಗಳವಾರ ಮತ್ತು ಬುಧವಾರ ನಗರದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ನಡೆಯಲಿದೆ. ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಅವರು ಭಾಗವಹಿಸಲಿದ್ದಾರೆ.

ಕ್ರೀಡಾಕೂಟ ಯಶಸ್ವಿಗೆ 100 ಮಂದಿ ತೀರ್ಪುಗಾರರಾಗಿ ಕೆಲಸ ಮಾಡಲಿದ್ದಾರೆ. ಸರ್ಕಾರಿ ನೌಕರರ ಜೊತೆಗೆ ನಗರದ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗಿಯಾಗಿ ಸಂಜೆ 6 ಗಂಟೆ ನಂತರ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಈಗಾಗಲೇ ಎಲ್ಲರಿಗೂ ಲಿಂಕ್ ಶೇರ್ ಮಾಡಲಾಗಿದ್ದು, ಪ್ರಸ್ತುತ 3 ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಜೊತೆಗೆ ಮಂಗಳವಾರ ಸ್ಥಳದಲ್ಲೇ ನೋಂದಣಿಗೆ ಅವಕಾಶ ನೀಡಲಾಗಿದೆ. ಇಲ್ಲಿ ಗೆದ್ದವರು ರಾಜ್ಯಮಟ್ಟ, ಅಲ್ಲಿಂದ ರಾಷ್ಟ್ರಮಟ್ಟಕ್ಕೆ ಹೋಗಲಿದ್ದಾರೆ.



# ಕಲಿತ ಕಳ್ಳ...

''**ಕಿಟ್ಟೋ!** ಚಳಿಯೊ! ಹೊಟ್ಟೆಯಲ್ಲಿ ನಡುಕ! ಅಯ್ಯೋ ಸಾಯ್ತಿನೊ. ಕಿಟ್ಟೊ.. ಅಯ್ಯೋ.. ಅಯ್ಯೋ. ಹ.. ಯ್ಯೋ. ಎಂಥಾ ವೇಳೆ ತಂದೆಪ್ಪಾ ಭಗವಂತಾ!. ಅಯ್ಯೋ ಚಳಿ! ಚಳಿ! ಏನಾದರೂ ಹೊಚ್ಚೊ. ಕಿಟ್ಟೋ! ಕಿಟ್ಟೊ ನಿನ್ನ ಮಕ್ಕಳು ಮರೀ. ಎಲ್ಲಾ ನೋಡಿದೆ.. ಆದರೆ ಇದು ನೋಡೋದು ಬ್ಯಾಡಪ್ಪಾ!. ದೇವರು ಲಗೂನೇ ಕಣ್ಣು ಮುಚ್ಚಲಿನ್ನು! ಎಲ್ಲಿ ಹೋದ್ಯೋ. ಕಿಟ್ಟೊ?''

'ಎಲ್ಲಿಲ್ಲಮ್ಮಾ. ಇಲ್ಲೇ ಇದ್ದೀನಿ! ಹೊಚ್ಚಲಿಕ್ಕೆ ಏನಾದ್ರೂ ಅದು, ಏನು ನೋಡಿದೆ ನೀನು ಹಾಗೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳ ಬೇಡಮ್ಮಾ ದಿನಮಾನ ಬಂದ್ಹಾಂಗ ಹೋಗಲಿಕ್ಕೇ ಬೇಕು! ಈಗಾದರೂ ಸಮಾಧಾನದಿಂದ ನಾಲ್ಕು ದಿನಾ ಹೋಗಲಿ!

'ಎಂಥಾ. ಸಮಾಧಾನ! ಸುಡಗಾಡಿನಾಗಿನ. ಸಮಾಧಾನ! ಸುಟ್ಟು ಹೋಗಲಪ್ಪಾ ಇಂಥಾ ಸಮಾಧಾನ! ಅಯ್ಯೋ.. ಬಾಳಾಕಿಟ್ಟೋ!. ಸಾಯ್ತಿನೋ.. ಇನ್ನ!. ನಿನಗ ಕಲಿಸಿ. ಏನು ದಂಡೆಗೆ ಹಚ್ಚಿದ್ಹಾಂಗಾತು. ನಡು ಹೊಳ್ಯಾಗ. ಹರಿಗೋಲಿನ ಹುಟ್ಟು. ಮುರಿದ್ಹಾಂಗ ಅತಲ್ಲ. ನಿನ್ನ ಜನ್ಮಾ!

ಕಿಟ್ಟುವಿನ ವಿಷಣ್ಣವಾದ ಮೊಗದಿಂದ ಹೊರಟ ಬಿಸಿಯುಸಿರೊಂದು ಮನೆಯೊಳಗಿನ ಹವೆ ಯನ್ನೆಲ್ಲ ಬೆಚ್ಚಗೆ ಮಾಡಿತು. ಅದರಿಂದ ಮುದುಕಿಯ ಚಳಿಯೂ ಕೊಂಚ ಕಡಿಮೆಯಾ ಯಿತೇನೋ! ಸ್ವಲ್ಪ ಶಾಂತಗಾಗಿ, 'ಶಾಂತೀದು ಇನ್ನೂ ಒಳಗಿನ ಕೆಲಸ.. ಆಗಲಿಲ್ಲ? ನಿನಗ ಅಂಗಡಿಗೆ ಹೋಗಲಿಕ್ಕೆ ಹೊತ್ತಾಯ್ತುಎಂದು ಮತ್ತೊಂದು ಮಗ್ಗುಲಿಗೆ ಹೊರಳಲು ಯತ್ನಿಸಿದಳು.

ಸ್ಥಾವರ ಆಸ್ತಿ-ಪಾಸ್ತಿಗಳಿಲ್ಲದೆ ಕೇವಲ ಸಣ್ಣ ಸಂಬಳದ ಮೇಲೆ ಸಾಗುವ ಸಂಸಾರವು, ಸದ್ಯ ಸುಸ್ಥಿತಿಯಲ್ಲಿದ್ದಂತೆ ಕಂಡರೂ, ಅದು ತಳ ಹದಿ ಹಾಕದೆ ಕಟ್ಟಿದ ಕಟ್ಟಡದಂತೆಯೆ. ಈ ಮಾತಿನ ಅರಿವು ಶ್ರೀನಿವಾಸರಾಯರಿಗೆ ಇರಲಿಲ್ಲವೆಂತಲ್ಲ, ಇತ್ತು. ಅಂತೆಯೆ ಅವರು ತಾಲ್ಲೂಕು ಕಚೇರಿ ಯೊಳಗಿನ ಸಣ್ಣಗುಮಾಸ್ತರಾಗಿದ್ದರೂ ಮೂರು ಸಾವಿರ ರೂಪಾಯಿಗಳ ಜೀವವಿಮೆಯೊಂದನ್ನು ಮಾಡಿಸಿದ್ದರು-ಮುಪ್ಪಿನ ಕಾಲಕ್ಕೆ ನೆರವಾದೀತೆಂದು. ಇದೂ ಅಲ್ಲದೆ, ಸಂಬಳದಲ್ಲಿ ಮನೆತನ ಸಾಗಿಸಿ ಹಿರಿಯ ಮಗನನ್ನು-ಕಿಟ್ಟೊ ಆತನ ಹೆಸರು-ಬಿ.ಎ.ವರೆಗೆ ಅಭ್ಯಾಸ ಮಾಡಿಸಿದ್ದರು. ಅದರಲ್ಲೂ ವಿಶೇಷವೆಂದರೆ ಇಷ್ಟರಲ್ಲಿಯೆ ಕಿಟ್ಟುವಿನ ಮದುವೆಯನ್ನೂ ಮಾಡಿಬಿಟ್ಟಿದ್ದರು. ಇನ್ನೇನು, ಐದಾರು ತಿಂಗಳಲ್ಲಿ ಸೊಸೆ ಮನೆಗೆ ಬರುವಳು, ಅಷ್ಟರಲ್ಲಿಯೆ ಕಿಟ್ಟುವಿನ ಪರೀಕ್ಷೆಯು ಆಗುವುದು, ಮತ್ತೇನು? ಪ್ರಾಂತಸಾಹೇಬರ ಗುರುತೂ ಇದೆ, ಸ್ವಲ್ಪ ಹೇಳಿಕೊಂಡು ಕಿಟ್ಟುವಿಗೆ ಎಲ್ಲಿಯಾದರೂ ಒಂದು ಕೆಲಸ ಕೊಡಿಸಿದಿರೆ ತೀರಿತು. ಅವರ ಭಾರವಂತೂ ಬೇರೆ ಕಡೆಗೆ ಹೋಗುವುದು. ನನ್ನ ಸಂಬಳದಲ್ಲಿ ಸಣ್ಣ ಹುಡುಗನ ಶಿಕ್ಷಣ-ಮನೆಯ ವೆಚ್ಚಗಳು ಸಾಗುವವು ಇವೇ ಮೊದಲಾದ ಕನಸುಗಳನ್ನು ಕಾಣುತ್ತಾ ಶ್ರೀನಿವಾಸರಾಯರು ಸುಖದಲ್ಲಿದ್ದರು. ಆದರೆ ವಿಧವೆಯಾದ ಮಗಳು ಮುಂದೆ ಹಾಯ್ದು ಹೋದಾಗ, ಅವರ ಹೃದಯಕ್ಕೆ ಸಾವಿರ ಚೇಳು ಕಡಿದಷ್ಟು ನೋವಾಗುವುದು. ಆದರೂ ಎಲ್ಲರಿಗೂ ಎಲ್ಲಾ ವಿಷಯಗಳಲ್ಲಿಯೂ ಎಲ್ಲಿ ಸರಿಯಾಗಿರುತ್ತದೆ! ಯಾವುದಾದರೊಂದು ಕೊರತೆ ಇದ್ದೆ ಇರುವುದಲ್ಲ! ಎಂದುಕೊಂಡು ಮನಸ್ಸಿಗೆ ಏನೋ ಸ್ವಲ್ಪ ಸಮಾಧಾನವಾಡಿ ಕೊಳ್ಳುತ್ತಿದ್ದರು.

ಶ್ರೀನಿವಾಸರಾಯರ ಸಂಸಾರ ಕಟ್ಟಡವು, ಯಾವುದೊ ಒಂದು ಮೂಲೆಯಲ್ಲಿ ಸ್ವಲ್ಪ ಕೆಳ ಗಿಳಿದದ್ದು ಎಲ್ಲವೂ ಒಮ್ಮೆಲೆ ಮುರಿದೇ ಬಿತ್ತು. ರಾಯರು ಅಕಸ್ಮಾತ್ ತೀರಿ ಕೊಂಡುದರಿಂದ, ಕಿಟ್ಟುವಿನ ಓದು ಅಷ್ಟಕ್ಕೆಯೆ ನಿಂತಿತ್ತು, ಮನೆಗೆ ಬಂದ. 'ಮಾವ ಸತ್ವ, ಮಾತನಾಡಿಸಬೇಕು? ಎಂದು ಶಾಂತೆಯ ತಂದೆ ಅವಳನ್ನು ಕರೆದುಕೊಂಡು ಬಂದು, ನಾಲ್ಕು ದಿನ ನಿಂತು, ಅವಳನ್ನು ಅಲ್ಲಿಯೆ ಬಿಟ್ಟು ಹೋದ, ಅಂತೂ ಕಿಟ್ಟುವಿಗೆ ತಾಯಿ, ಅಕ್ಕ, ತಮ್ಮ ಹಾಗೂ ಈಗ ಮನೆಗೆ ಬಂದ ಹೆಂಡತಿ ಇಷ್ಟು ಜನರ ಭಾರ ಹೊರಬೇಕಾಯಿತು. ಹಿರಿಯರಿಂದ ಬಂದ ಆಸ್ತಿಯೆಂದರೆ ದೂರದ ಹಳ್ಳಿಯಲ್ಲೊಂದು ಮನೆ, ಬರಬೇಕಾದ ವಿಮೆಯ ಹಣ ಇಷ್ಟೇ! ವಿಮೆಯ ವಿಚಾರ ಮಾಡಲಾ ಯಿತು, ಪರದೇಶದ ಕಂಪನಿ. ಯುದ್ಧದ ವಿಷಮವಾತಾವರಣದ ಮೂಲಕ ಅವರ ಆಫೀಸು ಮುಚ್ಚಲ್ಪಟ್ಟಿದ್ದಿತಂತೆ. ಅದರ ಪ್ರಧಾನ ಕಾರ್ಯಾಲಯ ಅಮೇರಿಕೆಯಲ್ಲಿ ಆದುದರಿಂದ ಅತ್ತ ಕೆಲಸ ನಡೆಯಿಸಿ, ವಾರಸ್ ದಾರರ ನಿಶ್ಚಯವಾದ ಮೇಲೆ ಆ ಹಣ ಕೈಗೆ ಸಿಕ್ಕುವುದು. ಅದರಿಂದ ಅದೂ ಸದ್ಯಕ್ಕೆ ಕನ್ನಡಿಯೊಳಗಿನ ಗಂಟೆ.

ಹೀಗಿತ್ತು, ಕಿಟ್ಟುವಿನ ಮನೆತನಕ್ಕೆ ಹಿರಿಯರಿಂದ ಬಂದ ಆಸ್ತಿಯ ಆಧಾರೆ. ಎಂದ ಮೇಲೆ ಅವನ ಶಿಕ್ಷಣದ ಮುಂದೆ ಹೇಗೆ ಸಾಗಬೇಕು? ಅದರಿಂದ ಆತನು ಕಲಿಯುವುದನ್ನು ಬಿಟ್ಟು ಮನೆತನ ಸಾಗಿಸುವ ಯೋಚನೆ ಮಾಡಬೇಕಾಯಿತು. ತಾಯಿಯ ಹತ್ತಿರ ಇದ್ದ ಅಲ್ಪ ಸ್ವಲ್ಪ ಬಂಗಾರದ ಒಡವೆ ಗಳನ್ನು ಮಾರಿ, ತಂದೆಯ ಉತ್ತರಕರ್ಮ ತೀರಿಸಿ ತಿಲಾಂಜಲಿ ಕೊಟ್ಟನು. ಎಲ್ಲವನ್ನೂ ಬಿಡಲು ಬಂದೀತು, ಆದರೆ ಈ ಧರ್ಮದ ಕಟ್ಟಳೆಗನ್ನು ಮೀರುವುದು ಸಾಧ್ಯವೆ? ಧಾರ್ಮಿಕ ವಿಧಿ ವಿಧಾನಗಳನ್ನಷ್ಟು ತೀರಿಸಿದ ಮೇಲೆ, ಉಳಿದ ನಾಲ್ಕು ಕಾಸುಗಳಿಂದ ಅಂತೂ ಇಂತೂ ನಾಲ್ಕು ದಿನ ಹೊಟ್ಟೆಗಿಷ್ಟು ಹಿಟ್ಟೊ ನೀರೂ ಆಯಿತು.

ಮುಂದೆ ಮನೆತನ ಸಾಗಿಸಲು ಕಿಟ್ಟು ಕೆಲಸ ಹುಡುಕಬೇಕಾಯಿತು. ಎಲ್ಲಾ ಕಡೆಗೂ ಕೆಲಸಕ್ಕೆ ಅರ್ಜಿ ಹಾಕಿದ. ಇಂದಿನ ಈ ನಿರುದ್ಯೋಗ-ಯುಗದಲ್ಲಿ ಕೇವಲ ಅರ್ಜಿಯಿಂದಲೇ ಕೆಲಸ ಬೇಗನೆ ಹೇಗೆ ಸಿಕ್ಕಬೇಕು? ಕೆಲಸ ಸಿಕ್ಕುವವರೆಗೆ ಎಲ್ಲಿಯಾದರೂ ಅಂಗಡಿಯಲ್ಲಿ ಲೆಕ್ಕ ಬರೆದು, ಬಂದದ್ದರಲ್ಲಿಯೇ ಸಂಸಾರ ಸಾಗಿಸಬೇಕೆಂದು, ಲೆಕ್ಕ ಬರೆಯುವ ಕೆಲಸ ಹಿಡಿಯಲು ಅಂಗಡಿಗೆ ಹೋದ. ಅಂಗಡಿಕಾರನು 'ಹೊಟ್ಟೆಗೆ ಕಾಳು-ಕಡಿಗಳನ್ನು ಒಯ್ಯುವಂತಿದ್ದರೆ ನಾಳೆಯಿಂದ ಬರಲಿಕ್ಕೆ ಬರುತ್ತಿರು, ಇಲ್ಲದಿದ್ದರೆ ಬೇಡ! ಈಗೇನು ಬರೆಯುವವರಿಗೆ ಕಡಿಮೆ? ದಿನಾ ಕೊಳಿವಿ ಅಕ್ಕಿ ಕೊಟ್ಟರೆ, ಬಂದು ಬರೆದು ಹೋಗ್ತಾನ, ಆ ಪೇನ್ಶನರ್ ಮಾಸ್ತರು! ಎಂದು ಹೇಳಿಬಿಟ್ಟನು. 'ಇರಲಿ, ಇದಕ್ಕೂ ಹೆಚ್ಚು ಎಲ್ಲಿ ಸಿಗತ್ತದ? ಒಂದುವೇಳೆ ಎರಡನೆಯ ಕಡೆಗೆ ಸಿಕ್ಕರೂ ಇದನ್ನೇನು ನಾನು ಕಾಯಂ ಮಾಡ ಬೇಕಿಲ್ಲ. ನಾಲ್ಕು ದಿನ ಕೆಲಸ ಸಿಕ್ಕುವವರೆಗೆ ಮಾತ್ರ ಮಾಡುವುದು!' ಎಂದು ಹೆಚ್ಚಿಗೆ ವಿಚಾರಿಸದೆ ಕಿಟ್ಟುವೂ ಅದಕ್ಕೆ ಒಪ್ಪಿದ. ಅಂದಿನಿಂದ ಕಿಟ್ಟುವಿಗೆ ನಾಲ್ಕಾರು ಅಂಗಡಿಗಳಲ್ಲಿ ಲೆಕ್ಕ ಬರೆಯಲು ಕೆಲಸ ಸಿಕ್ಕಿತು, ಆದರಿಂದ ಅರೆಹೊಟ್ಟೆಯ ಜೀವನವು ಸಾಗಲಾರಂಭಿಸಿತು.

ಸರ್ಕಾರಿ ಕೆಲಸ ಸಿಕ್ಕುವವರೆಗೆ ಅಂಗಡಿಯ ಲೆಕ್ಕ ಬರೆಯಬೇಕೆಂದು ಕಿಟ್ಟು ನಿಶ್ಚಯಿಸಿ ಬರೆ ಯುವುದನ್ನು ಹಿಡಿದ. ಆದರೆ ಇನ್ನೂ ಬೇರೆ ಕಡೆಗೆ ಕೆಲಸ ಸಿಕ್ಕಲಿಲ್ಲ. ಸಿಕ್ಕುವ ಸಂಬಳ-ಅಲ್ಲ ಕಾಳು-ಕಡಿ ಹೆಚ್ಚಾಗಲಿಲ್ಲ. ಸಂಬಳ ಹೆಚ್ಚಾಗದಿದ್ದರೂ ಸಂಸಾರ ದಿನ-ದಿನಕ್ಕೆ ದೊಡ್ಡದಾಗುತ್ತಿದ್ದಿತು. ಬಡತನಕ್ಕೆ ಸಂತತಿ ಬೇಡ ಬೇಡವೆಂದರೂ ಬಿಡುವುದಿಲ್ಲವಂತೆ. ಶಾಂತೆ ಈಗ ಎರಡು ಮಕ್ಕಳ ತಾಯಿ, ಮೇಲೆ ಮತ್ತೊಂದು ಬಸಿರು ಬೇರೆ. ತಾಯಿ ಈಗೊಂದು ವರ್ಷದಿಂದಲೂ ಕ್ಷಯದಿಂದ ಹಾಸಿಗೆ ಹಿಡಿದಿರುವಳು, ಅಕ್ಕ ಸ್ವಲ್ಪ ವಿಶಾಲ ಮನಸ್ಸಿನವಳು, ಅದರಲ್ಲೂ ಸುಧಾರಕ ಕಿಟ್ಟುವಿನ ಸಹವಾಸ ಬೇರೆ. ತಾಯಿ ಕಟ್ಟಾ ಸನಾತನಿಯಾದರೂ ಮಗಳು ನರ್ಸ್ ಕೆಲಸ ಮಾಡುವೆನೆನ್ನಲು ಅನಿವಾರ್ಯವಾಗಿ ಒಪ್ಪಿಗೆ ಕೊಡಬೇಕಾಯಿತು. ಅದರಿಂದ ಅಕ್ಕನ ಹೊರೆಯೊಂದು ಕಿಟ್ಟುವಿಗೆ ಕಡಿಮೆಯಾಗಿತ್ತು. ಇಷ್ಟೇ ಅಲ್ಲ, ಅವಳೇ ತನ್ನ ಹೊಟ್ಟೆ-ಬಟ್ಟೆ, ಸಾಗಿಸಿ ಕೊಂಡು ತಿಂಗಳೊಂದಕ್ಕೆ ಕಿಟ್ಟುವಿಗೆ ನಾಲ್ಕು ರೂಪಾಯಿ ಕಳುಹುಸುತ್ತಿದ್ದಳು. ಆದರೂ ಕಿಟ್ಟುವಿನ ಸಂಸಾರವು ಸುಖಮ ಯವಾಗಿ-ಬೇಡ-ಸುಸೂತ್ರವಾಗಿ ಸಾಗುವಂತೆಯೂ ಆಗಲಿಲ್ಲ.

ಕಿಟ್ಟು ಒಂದು ಅಂಗಡಿಯ ಲೆಕ್ಕ ಬರೆದು ಮತ್ತೊಂದು ಅಂಗಡಿಗೆ ಹೋಗಲೆಂದು ಹೊರಟ. ಹೊರಗೆ ಜಿಟಿಜಿಟಿ ಮಳೆ, ಆಕಾಶವು ತಿಳಿಯಾದ ಕಪ್ಪು ಮೋಡಗಳಿಂದ ಮುಚ್ಚಿದ್ದಿತು. ದಾರಿಯಲ್ಲಿ ಒಬ್ಬಿಬ್ಬರು ಕೊಡೆ ಹಿಡಿದು ಹೊರಟಿದ್ದರು. ಮಳೆ ಬೇಗ ನಿಲ್ಲುವ ಲಕ್ಷಣ ತೋರುತ್ತಿರಲಿಲ್ಲ. ಕಿಟ್ಟು ತಲೆಯ ಮೇಲಿನ ಟೋಪಿಗೆ ತೆಗೆದು ಬಗಲಲ್ಲಿ ಹಿಡಿದು, ಸ್ವಲ್ಪ ಬೇಗ ನಡೆದ. ಈಗ ಅವನು ಹೋಗಬೇಕಾದದ್ದು ಜವಳಿಯ ಅಂಗಡಿಗೆ. ಅದು ಸ್ವಲ್ಪ ದೂರವಿತ್ತು. ಅಲ್ಲಿ ಹೋಗುವುದರೊಳಗೆ ಟೊಪ್ಪಿಗೆ ತೊಯ್ಯುವುದು, ತಲೆ ತೊಯ್ದರೂ ಒರಸಲಿಕ್ಕೆ ಬಂದೀತೆಂದು ಕಿಟ್ಟುವಿನ ವಿಚಾರ. ಕೊಡೆ ಹಿಡಿದುಕೊಂಡು ಹೊರಟ ದಾರಿಕಾರನಿಗೆ ಇದೊಂದು ಮೋಜೆನಿಸಿತೇನೋ, ಅವನ ಮುಖದಲ್ಲಿ ಕಿರುನಗೆಯೊಂದು ಮಿಂಚಿತು.

ಹೋಗು-ಹೋಗುತ್ತಾ ಕಿಟ್ಟುವಿಗೆ ಹಿಂದಿನ ದಿನಗಳೆಲ್ಲ ನೆನಪಾಗ ತೊಡಗಿದುವು. ನಾಲ್ಕೈದು ವರ್ಷಗಳ ಹಿಂದೆ ತಾನು ಕಾಲೇಜಿನಲ್ಲಿದ್ದುದು, 'ಆಗ ತನ್ನ ಇಂಗ್ಲೀಷ್ ಎಷ್ಟು ಒಳ್ಳೆಯದಿತ್ತು. ಪ್ರಿನ್ಸಿಪಾಲ್‌ರೂ ಮೆಚ್ಚಿ ಹೊಗಳಿದ್ದರು. ಕನ್ನಡವೂ ಅದರಂತೆಯೇ, ನಾನು ಇಂಟರ್‌ನಲ್ಲಿದ್ದಾಗ ನನ್ನ ವಿಷಯ ಕನ್ನಡವಲ್ಲವಾದರೂ ಕಾಲೇಜ್ ಮಿಸೆಲೆನಿಗೆ ಒಂದು ಕವನವನ್ನು ಬರೆದು ಕೊಟ್ಟಿದ್ದೆ. ಎಷ್ಟು ಒಳ್ಳೆಯದಾಗಿತ್ತದು! ಒಂದೆರಡು ಅಭಿನಂದನಸರವಾದ ಪತ್ರಗಳು ಕೂಡ ಬಂದಿದ್ದುವು. ಆದರೆ ಆ ವಿದ್ಯೆ ಆ ಕನ್ನಡ, ಇಂದು ಬಾಳುವೆಗೆ ಏನೂ ಉಪಯೋಗ ಬೀಳ ದಾದುವಲ್ಲ! ಹಾಸಿಗೆ ಹಿಡಿದ ತಾಯಿಗೆ ಬೆಚ್ಚಗೆ ಹೊಚ್ಚಲು ಒಂದು ಶಾಲನ್ನು ಸಂಪಾದಿಸಲೂ ಸಹಾಯವಾಗಲಾರವಲ್ಲ! ಹೀಗೆ ಏನೇನನೋ ವಿಚಾರಿಸುತ್ತಿರುವಾಗಲೆ, ಮನಸ್ಸು ಉದ್ವಿಗ್ನತೆಯಿಂದ ಯಾವುದೋ ಒಂದು ನಿಶ್ಚಯಕ್ಕೆ ಬಂದು ನಿಂತಂತಾಯಿತು. ಮುಖವೂ ಪ್ರಸನ್ನ ವಾಯಿತು. ತಲೆಗೆ ಟೊಪ್ಪಿಗೆಯನ್ನು ಹಾಕಿಕೊಂಡು ಅಂಗಡಿಯಲ್ಲಿ ಕಾಲಿಟ್ಟನು.

'ಕಿಟ್ಟಪ್ಪಾ, ಬರಲಿಕ್ಕೆ ತಡವಾಯಿತೆಂದು? ಶೇಡಜಿಯವರು ಕೇಳಿದರು. ಮನೆಯಲ್ಲಿ ಅಮ್ಮನ ಮೈಯಲ್ಲಿ ನೆಟ್ಟಗಿಲ್ಲ ಸ್ವಲ್ಪ ನಿಲ್ಲಬೇಕಾಯಿತು ಎಂದು ಹೇಳಿ ತಿರುಗಿ ಶೇಡಜಿಯವರು ಏನಾಗಿದೆ? ಎಂದು ಕೇಳುವುದಕ್ಕಿಂತ ಮುಂಚಿತವಾಗಿಯೆ ತಾನು ಬರೆಯುವ ಸ್ಥಳಕ್ಕೆ ಹೋಗಿ ಕುಳಿತು ಬಿಟ್ಟ. ಬೇಗನೆ ಕೆಲಸ ತೀರಿಸಿಕೊಂಡು ಹೋಗಬೇಕೆಂದಿದ್ದಾನೇನೋ! ಎಂದುಕೊಂಡು ಶೇಡಜಿಯವರೂ ಅಷ್ಟಕ್ಕೇ ಸುಮ್ಮನಾದರು.

ಕಿಟ್ಟು ಬರೆಯಲು ಕುಳಿತುಕೊಳ್ಳುವ ಸ್ಥಳವು ಶಾಂತವಾದುದು. ಅಲ್ಲಿ ಗಿರಾಕಿಗಳ ಗಲಾಟೆ ಯಿಲ್ಲ. ಸುತ್ತೆಲ್ಲ ಜವುಳಿಯ ನಗಗಳಿದ್ದರೂ, ಅದಾವಾಗಲೋ ಒಮ್ಮೊಮ್ಮೆ ಒಬ್ಬ ಆಳು ಬಂದು ಬೇಕಾದುದನ್ನಷ್ಟು ಎತ್ತಿ ಒಯ್ಯುವನಿಷ್ಟೆ!

ಕಿಟ್ಟು ಬರೆಯಲು ಕುಳಿತ, ಕೀರ್ದಿಯನ್ನು ಕೈಯಲ್ಲಿ ತಕ್ಕೊಂಡ ಮಸಿಯಲ್ಲಿ ಲೆಕ್ಕಣಿಕೆ ಅದ್ದಿದ. ಬರೆಯಲು ಕೈಸಾಗಲಿಲ್ಲ. ಹಾಗೆಯೆ ಕುಳಿತ. ಮನಸ್ಸು ವಿಚಾರಮಾಲಿಕೆಯನ್ನು ಮುಡಿಯುತ್ತಾ ಮುಂದೆ ಸಾಗತೊಡಗಿತು. ಲೆಕ್ಕಣಿಕೆಯ ಮಸಿ ಆರಿತು. ಮತ್ತೆ ಅದ್ದಿದ, ಬರೆಯಲೆಂದು, ಮತ್ತೂ ಬರೆಯಲಾಗಲಿಲ್ಲ. ಕಿರ್ದಿಯನ್ನು ಬದಿಗೆ ಇಟ್ಟ, ಲೆಕ್ಕಣಿಕೆಯನ್ನು ಒಗೆದ, ಸುತ್ತಲೂ ನೋಡಿದ, ಚೆಟ್ಟನೆ ಎದ್ದು ನಿಂತ. 'ಏನೇ ಆಗಲಿ, ಹಾಗೆ ಮಾಡದೆ ಗತಿಯೇ ಇಲ್ಲ, ಈಗಲೇ ನೋಡಿ ಇಡ ಬೇಕು ಎಂದು ತನ್ನಲ್ಲಿ ತಾನೇ ಅಸ್ಫುಟವಾಗಿ ಗುಣುಗುಟ್ಟಿದ. ಜವುಳಿಯ ಕಪಾಟುಗಳನ್ನೆಲ್ಲ ಕಿತ್ತು ಹಾಕತೊಡಗಿದ. ರಗ್ಗುಗಳನ್ನೆಲ್ಲ ಒಂದೊಂದಾಗಿ ಇಳುಹಲಾರಂಭಿಸಿದ, 'ಇದು ಒಳ್ಳೆಯದಿದೆ! ಮಳೆಗಾಲದಲ್ಲಿ ಹೊದೆಯಲಿಕ್ಕೆ, ಆದರೆ ಇದರೆ ಕಲರ್ ಒಳ್ಳೆಯದಿಲ್ಲ. ಇಂತಹದೆ ಮತ್ತೊಂದನ್ನು ನೋಡಬೇಕು! ಎಂದು ಕಪಾಟಿನತ್ತ ದೃಷ್ಟಿಯನ್ನು ಬೀರಿದ. ಕೂಡಲೆ ನಾನೇನು ಹಣ ಕೊಟ್ಟು ಕೊಳ್ಳಬೇಕಾಗಿದೆಯೇ? ಇಷ್ಟೇಕೆ ಚಿಕಿತ್ಸೆ? ಎಂದುಕೊಂಡನೇನೋ! ಮುಖದಲ್ಲಿ ಹುಚ್ಚುನಗೆ ಯೊಂದು ಅರಳಿತು. ಯಾವುದೇ ಇರಲಿ, ಕೈಗೆ ಬಂದದ್ದು ಕೈಲಾಸ! ಎಂದುಕೊಂಡು ಅದನ್ನೇ ಮೇಲೆ ತೆಗೆದು ಇಟ್ಟು, ಬರೆಯುವ ಸ್ಥಳಕ್ಕೆ ಬಂದು ಕುಳಿತ.

ಬುದ್ಧಿ ಬಲವಿದ್ದವನು ತಪ್ಪು ಮಾಡಲು ಮನಸ್ಸು ಮಾಡಿದರೂ, ದಾರಿ ತಪ್ಪಲು ಸುಲಭ ಸಾಧ್ಯವಾಗುವುದಿಲ್ಲ. ಕಿಟ್ಟು ವಿಚಾರಿಸತೊಡಗಿದ. 'ಇದೇನು ನನ್ನ ವಿಚಾರ? ನಾನಿಷ್ಟು ಕಲಿತ ವನು, ತಿಳಿದವನು.! ತುಡುಗು ಮಾಡಲು ಯೋಚಿಸಿದೆನೇ? ಈ ಮರ್ಕಟ ಮನಸ್ಸು, ಕ್ಷಣದಲ್ಲಿ ಬೇಕಾದುದನ್ನು ಮಾಡಲೂ ಮುಂದೂಡುವುದಲ್ಲ.! ನಾನು ಕಳ್ಳ ನೆನಿಸಿಕೊಳ್ಳಲೇ. ಕಳವು! ಕಳವು! ಕೆಟ್ಟ ಕೆಲಸ! ಮಹಾ ಪಾಪ! ಇಂತಹ ಕೀಳು ಕೆಲಸ ನನ್ನಿಂದಾಗದು! ಸುಧಾರಿಸಿದವನಾದ ನನ್ನ ಮನಸ್ಸೇ ಹೀಗೆಂದ ಮೇಲೆ ಅಶಿಕ್ಷಿತ ಜನರ ಮನಸ್ಸಿನ ಹಂತವೆಲ್ಲಿ? ಅಂತೆಯೆ ಸಮಾಜದಲ್ಲಿ ಇಷ್ಟು ಕಳವು! ಕೊಲೆಗಳು! ನಾನೂ ಅಂತಹ ಕಳ್ಳರಲ್ಲೊಬ್ಬನಾಗಲೇ? ಆಗಲಾರೆ? ಎಂದೂ ಆಗ ಲಾರೆ. ಮಾಲಕನನ್ನು ಕೇಳಲೆ? ಕೇಳಿದರೆ ಕೊಟ್ಟಾರೆ? ಇಲ್ಲ ಇಲ್ಲ, ಕೇಳಿದರೆ ಕೊಡುವುದಿಲ್ಲ! ಖಂಡಿತ ಕೊಡುವುದಿಲ್ಲ!. ಕೇಳಿದರೆ ಕೊಡುವುದಿಲ್ಲ, ಕೊಳ್ಳಲು ಕೈಯಲ್ಲಿ ಕಾಸಿಲ್ಲ! ಕದಿಯುವುದು ಕೆಡುಕು! ಆದರೆ. ಮನೆಯಲ್ಲಿ ತಾಯಿ ಚಳಿ! ಚಳಿ! ಎಂದು ನಡುಗುತ್ತಿರುವಳಲ್ಲ! ಏನು ಆರ್ತ ಸ್ವರವದು!. ಅದನ್ನು ಮತ್ತೆ ಮತ್ತೆ ನನ್ನಿಂದ ಕೇಳುವುದಕ್ಕಾಗುವುದಿಲ್ಲ! ಕೇಳಲಾರೆ! ಕಿಟ್ಟುವಿನ ಮೈ ನಡುಗಿತು. ಕಣ್ಣು ಕುಣಿಕೆಯಲ್ಲಿ ನೀರೊಸರಿತು. ಮನೆಯಿಂದ ಹೊರಬೀಳುವಾಗ ಹೊತ್ತು ಕೊಳ್ಳಲು ಕೇಳಿದ ಅಮ್ಮನ ಮಾತುಗಳು ಒಂದೆಸವನೆ ಕಿವಿಯಲ್ಲಿ ಸುತ್ತತೊಡಗಿದುವು. ಬೇಕು ಅಮ್ಮನಿಗೆ ಬೆಚ್ಚಗೆ ಹೊದ್ದಿಸಲು ಬೇಕು! ಅದನ್ನು ತಂದುಕೊಡುವುದು ಆಕೆಯ ಮಗನಾದ ನನ್ನ ಕರ್ತವ್ಯ ಆದರೆ. ಅದನ್ನು ಸಂಪಾದಿಸಿ ಕೊಡುವಷ್ಟು ನನ್ನಲ್ಲಿ ಸಾಮರ್ಥ್ಯವಿಲ್ಲ. ಅನುಕೂಲತೆ ಯಿಲ್ಲ! ಅದಕ್ಕೆ ಉಳಿದುದೊಂದೇ ಉಪಾಯ.!

ಅದೇ ದಿವಸ ಸಂಜೆಗೆ ಕಿಟ್ಟುವಿನ ಮಾತೃಪ್ರೇಮವು ಆತನ ವಿವೇಕವನ್ನು ಗೆದ್ದಿತು.

ಈಗ ಕಿಟ್ಟು ಪೊಲೀಸ ಸ್ಟೇಶನಿನ ಒಂದು ಮೂಲೆಯಲ್ಲಿ ಮೋರೆ ಒಣಗಿದೆ. ಕಣ್ಣು ಕೆಂಪಗಾಗಿವೆ. ಕಣ್ಣೀರು ಹರಿದು ಹರಿದು ಗಲ್ಲಗಳು ಹಸಿಯಾಗಿವೆ. ಧೂಳು ಕೂತು ಹೊಲಸಾಗಿವೆ. ಮೈಯಲ್ಲಿಯ ಶರಟಿಗೆಲ್ಲ ಕೆಸರುಹತ್ತಿದೆ. ತಲೆಯ ಮೇಲೆ ಟೊಪ್ಪಿಗೆಯಿಲ್ಲ, ಮನದಲ್ಲಿ ನಾನೇಕೆ ಹಾಗೆ ಮಾಡಿದೆ? ಯಾವ ಕೆಟ್ಟ ಕಾಲವು ಆ ಕಳವಿಗೆ ಚೈತನ್ಯ ಕೊಟ್ಟಿತೋ! ನಿನ್ನೆಯ ಸಂಜೆ. ಬೇಡ ಮರಳಿ ನೆನೆಯುವುದೇ ಬೇಡ ಎಂತಹ ಭೀಕರ ಒದೆತಗಳವು! ಅದೂ ದಾರಿಯಲ್ಲಿ! ಅಂಗಡಿ ಯವರೆಲ್ಲ ನೋಡುತ್ತಿದ್ದರು. ಹುಡುಗರು ನಗುತ್ತಿದ್ದರು, ಕಳ್ಳ! ಕಳ್ಳ! ಎಂದು ಕೂಗಿಕೊಳ್ಳುತ್ತಿದ್ದರು.ಜನರೇನೇನೊ ಆಡಿಕೊಳ್ಳುತ್ತಿದ್ದರು! ನೆಲಕ್ಕೆ ಮುಗ್ಗರಿಸಿಬಿದ್ದರೂ ಹಾಗೆಯೆ ಎಳೆದರಲ್ಲ! ಒದೆದರಲ್ಲ! ಏನು ನಿಷ್ಕರುಣಿಗಳು! ದಾರಿಯಲ್ಲಿಯ ಒಂದೊಂದು ಮಾತಿನ ಸೆಟ್ಟಿನ ನೋವಿಗೆ ಇಲ್ಲಿ ಹೊಡೆದ ನೂರು ನೂರು ಹೊಡೆತಗಳ ನೋವೂ ಸರಿಯೆನಿಸದು, ಎಂತಹ ಅಪಮಾನಕರ ವಾದ ಸಂಗತಿಯದು! ಜನರಲ್ಲಿ ನಾಳೆ ಹೇಗೆ ಮೋರೆತೋರಿಸಲೆ?. ಮೋರೆ ತೋರಿಸುವುದು. ಇಲ್ಲಿಂದ ಬಿಟ್ಟರಲ್ಲವೆ? ನಿನ್ನೆಯ ಸಂಜೆ ಶಾಂತೆ ಎಷ್ಟು ಹೊತ್ತು ದಾರಿಕಾಯ್ದಳೊ! ತಾಯಿ ಹಾಸಿಗೆ ಹಿಡಿದವಳು, ಶಾಂತೆಗಂತೂ ಕೂಸು ಕೈಬಿಡುವುದಿಲ್ಲ ಎಂದ ಮೇಲೆ ಹೊರಗೆ ಬಂದು, ನಾನೆಲ್ಲಿ -ಎಂಬುದನ್ನು ಕೇಳುವವರಾದರೂ ಯಾರು? ಯಾರನ್ನು? ಒಂದುವೇಳೆ ಕಂಡವರು ಯಾರಾದರೂ ಹೇಳಿದ್ದರೆ ಎಷ್ಟು ನೊಂದುಕೊಂಡರೊ! ಮೊದಲೇ ನಾನು ಬರುವಾಗ, ನನ್ನ ಅಸಹಾಯ ಸ್ಥಿತಿಯನ್ನು ಕಂಡು ಮರುಗುತ್ತಿದ್ದಳು ತಾಯಿ! ಈ ಸಂಗತಿಯನ್ನು ಕೇಳಿ ದ್ದರಂತೂ..'' ಎಂದು ಏನೇನನೊ ವಿಚಾರಿಸುತ್ತಿರುವಾಗಲೆ-'ಹರಾಮಖೋರ್! ಮತ್ತೇನು ಕದ್ದಾನೊ! ಒಂದೂ ಹೇಳುವುದಿಲ್ಲ, ಲಾಕಪ್ಪಿಗೆ ಒಯ್ದು ಬಿಡಿರಿ! ಹೋಗಲಿ, ಹಾಳಾಗಿ!'' ಎಂದು ಹತ್ತಿರನಿಂತ ಪೊಲೀಸನಿಗೆ ಹವಾಲದಾರನು ಹೇಳಿದನು.

ಕಿಟ್ಟು ತಡವರಿಸುತ್ತ ಇಲ್ಲ! ನಾನೆಂದೂ ಕಳವು ಮಾಡಿಲ್ಲ! ಮನೆಯಲ್ಲಿ ನನ್ನ ತಾಯಿ ಬೇನೆಯಿಂದ ಮಲ ಗಿದ್ದಾಳೆ. ಚಳಿ! ಚಳಿ! ಎಂದಳು, ಬೇರೆಯೇನೂ ಉಪಾಯಗಾಣದೆ ಹೀಗೆ ಮಾಡಿದೆ. ನಾನೆಂದೂ ಇಂತಹ ಕೆಲಸ ಮಾಡಿದವನಲ್ಲ, ಇದನ್ನು ಮಾಡಿದ್ದಕ್ಕೆ ತುಂಬಾ ಪಶ್ಚಾತಾಪ ಪಡುತ್ತಿದ್ದೇನೆ. ನಾನು ಹುಂಬನೆಂದು ತಿಳಿಯಬೇಡಿರಿ. ಕಲಿತವ ನಿದ್ದೇನೆ! ನನಗೂ ಬುದ್ಧಿ ಇದೆ, ಒಮ್ಮೆ ಕಾಲು ಜಾರಿದ ಮೇಲೆ ಮತ್ತೆ ಮತ್ತೆ ಹಾಗೆಯೆ ಆಗುತ್ತದೆಯೆಂದೇನೂ ಅಲ್ಲ! ಎಂದ.

'ಮುಚ್ಚು ಬಾಯಿ ಸೂ ಮಗನೆ! ಕಲಿತವನಂತೆ! ತಿಳಿದವ! ತಿಳಿದವರು ಹಿಂಗ ಮಾಡತಾರಾ? ಮತ್ತೆ ನಮ್ಮ ಮುಂದ ಹಾಂಗು ಹೀಂಗ ಅಂತ ಹೇಳ ತಾನ! ದೊಡ್ಡ ದೊಡ್ಡ ಮಾತು ಹೇಳವನಿಗೆ ಕಳವು ಮಾಡಲಿಕ್ಕೇನಾಗಿತ್ತು?

'ರಾವಸಾಹೇಬರೆ, ನಾ ಹೇಳುವುದನ್ನಾದರೂ ಕೇಳಿಕೊಳ್ಳಿರಿ ವಿಚಾರ ಮಾಡಿರಿ! ಆ ಮೇಲೆ ಬೇಕಾದುದನ್ನು ಹೇಳಿರಿ! ಏನೆಂದರೂ ಮನುಷ್ಯನ ಕರ್ತವ್ಯ ಕರ್ತವ್ಯಗಳಿಗೆ ಅವನಷ್ಟೇ ಅಲ್ಲದೆ, ಅವನ ಸುತ್ತಲಿನ ಪರಿಸ್ಥಿತಿಯು ಹೇಗೆ ಕಾರಣವಾಗಿರುತ್ತದೆಯೆಂಬುದನ್ನೂ ವಿಚಾರ ಮಾಡಿರಿ! ನನ್ನ ಸ್ಥಿತಿಯಲ್ಲಿ ಇದ್ದರೆ ನೀವೂ ಇದೇ ಕಳವು 'ಬಾಯಿಮುಚ್ಚು! ಏನು ಬೊಗಳತಿದ್ದಿಯಾ? ಎಲ್ಲಿ ಇದ್ದೀದಿ ನೆನಸದನು ನಿನಗ? ಎಂದು ಎದ್ದೇ ಬಂದ, ಹವಾಲದಾರ.

ಧಫ್‌ಧಮ್. ಧಫ್. ಧಫ್

''ಆಯ್ಯೋ ಸತ್ತೆ. ಸತ್ತೆ!. ಸತ್ತೆ.''

ಕಿಟ್ಟುವಿನ ವಿದ್ಯೆ, ಅಭ್ಯಾಸ, ಕಾರ್ಯಕುಶಲತೆಗಳ್ಯಾವುದೂ ಆತನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗಲಿಲ್ಲ!

ಕಿಟ್ಟು ಜೈಲಿನಲ್ಲಿ ನರಳುವಾಗ-ತಾಯಿ ಮನೆಯಲ್ಲಿ 'ಚಳಿ! ಚಳಿ! ಎಂದು ನಡುಗಿ ಜೀವಬಿಡುತ್ತಿರುವಾಗ-ಶಾಂತೆ ನಿನ್ನೆಯಿಂದಲೂ ಗಂಡ ಮನೆಗೆ ಯಾಕ ಬರಲಿಲ್ಲ ಎಂದು ಚಿಂತಿಸುತ್ತಿರುವಾಗ 'ಒಳ್ಳೆದಾಯ್ತವನಿಗೆ! ಎಷ್ಟು ಸಾರೆ ಹೀಂಗ ಕಳವು ಮಾಡಿದ್ದನೊ! ಕಲಿತವನಂತೆ! ಕಲಿತ ಕಳ್ಳನಲ್ಲವೆ? ಎಂದು ಜನರು ಆಡಿ ಕೊಳ್ಳುತ್ತಿದ್ದರು.

## ನಿರ್ಮಮ



ಇಂದು ನಿರ್ಮಮದ ಬಗ್ಗೆ ತಿಳಿದುಕೊಳ್ಳೋಣ. ನಿರ್ಮಮ ಎಂದರೆ, ಯಾವುದೇ ವಸ್ತು, ವ್ಯಕ್ತಿ, ಸಂಗತಿ ಮತ್ತು ವಿಚಾರಗಳಿಗೆ ಅತಿಯಾಗಿ ಅಂಟಿಕೊಳ್ಳದೆ ಇರುವುದು. ಏಕೆ ಅತಿಯಾಗಿ ಅಂಟಿಕೊಳ್ಳಬಾರದು?. ಅತಿಯಾಗಿ ಅಂಟಿಕೊಂಡರೆ ಮೋಹ ಹೆಚ್ಚಾಗುತ್ತದೆ. ಕಡೆಗೆ ದುಃಖ ವಾಗುತ್ತದೆ. ಮತ್ತೆ ಸಮಾಧಾನ ಕಳೆದುಕೊಳ್ಳುತ್ತೇವೆ. ಹೇಗೆ ಅಂತ ನೋಡೋಣ?.

ಈ ಜಗತ್ತಿನಲ್ಲಿ ಏನೇನು ಇದೆ, ಅದು ಕಾಯಂ ಆಗಿ ನನ್ನದು ಅಂತ ಇರೋದಿಲ್ಲ, ಯಾವುದೇ ವಸ್ತು ಕೆಲವು ಕಾಲದವರೆಗೆ ನನ್ನದಾಗಿ ಇರುತ್ತದೆ. ಆ ಕಾಲ ಹೋಯ್ತು ಅಂದರೆ ಆ ವಸ್ತುವಿನ ಮಾಲೀಕತ್ವ ಕಳೆದುಕೊಳ್ಳುತ್ತೇವೆ. ಭಾರತ ದೇಶವಾಗಲಿ, ಬೇರೆ ಯಾವ ದೇಶವಾಗಲಿ, ಇತಿಹಾಸ ನೋಡಿದರೆ ರಾಜರು, ಮಹಾರಾಜರು, ಸಂಸ್ಥಾಪಕರು ಇದ್ದರು. ಆ ಪ್ರದೇಶ ಕೆಲವೊಮ್ಮೆ ಇವರದಾದರೆ ಮತ್ತೊಮ್ಮೆ ಬೇರೆಯವರಾದಾಗಿರುತ್ತಿತ್ತು. ಕೇವಲ ಲೆತ್ತ ಆಟ ಆಡಿ ಸೋತಿದ್ದರಿಂದ ಪಾಂಡವರ ರಾಜ್ಯ ಕೌರವರದಾಗಿತ್ತು. ಪಾಂಡವರ ಹೆಂಡತಿ ಕೌರವರ ಸ್ವತ್ತಾಗಿದ್ದಳು. ಕೇವಲ ಲೆತ್ತದಿಂದ ಮಾಲೀಕತ್ವ ಬದಲಾಗಿತ್ತು. ಅಂದರೆ ಮಾಲೀಕತ್ವ ಅನ್ನುವುದು ಅಸ್ಥಿರವಾದದ್ದು. ಅಶಾಶ್ವತ. ಯಾವುದೋ ಒಂದು ಸಣ್ಣ ಪುಟ್ಟ ಕಾರಣಕ್ಕೆ ಮಾಲೀಕತ್ವ ಕಳೆದುಕೊಳ್ಳುತ್ತೇವೆ. ಭಯಂಕರ ಯುದ್ಧ ಮಾಡಿ ಒಂದು ದೇಶ ಗೆಲ್ಲುತ್ತೇವೆ. ಸಾಮ್ರಾಜ್ಯ ವಿಸ್ತಾರ ಮಾಡುತ್ತೇವೆ. ಇನ್ನೇನು ಈ ಸಾಮ್ರಾಜ್ಯ ನನ್ನದು ಎಂದು ಭಾವಿಸುತ್ತೇವೆ. ಲಕ್ಷಾಂತರ ಪ್ರಜೆ, ತುಂಬಿದ ಭಂಡಾರ, ಲಕ್ಷಾಂತರ ಸೈನಿಕರು ಇಂತಹ ಚಕ್ರಾಧಿಪತಿ ಆಗಿದ್ದರು. ಈಗ ಉಳಿದಿಲ್ಲ. ನೆಪೋಲಿಯನ್ ಬೋನಾಪಾರ್ಟ್, ಫ್ರಾನ್ಸ್ ದೇಶದಲ್ಲಿ ತುಂಬಾ ಹೆಸರುವಾಸಿ. ಸಾಮಾನ್ಯ ಬಡ ಹುಡುಗ ಸಾಮ್ರಾಟನಾದ. ಬಾಲ್ಯದಲ್ಲಿ ಒಂದು ಹಣ್ಣು ಕೊಂಡುಕೊಳ್ಳಲು ಅವನ ಬಳಿ ಹಣವಿರಲಿಲ್ಲ. ಇಂತಹ ಹುಡುಗ ಒಂದು ಕಾಲದಲ್ಲಿ ಯುರೋಪ್ ದೇಶ ಆಳುತ್ತಾ ಇದ್ದನು. ಒಂದು ಕಾಲದಲ್ಲಿ ಒಂದು ಹಣ್ಣು ಖರೀದಿಸಲು ಹಣವಿರಲಿಲ್ಲ, ಇಲ್ಲದ ಸಂಪತ್ತು ಈಗ ಸಂಪತ್ತಿನ ಒಡೆಯನಾಗಿದ್ದನು. ಆದರೆ ಅದು ಹಾಗೆ ಉಳಿಯಲಿಲ್ಲ, ಮುಂದೆ ಸ್ವಲ್ಪ ವರ್ಷದಲ್ಲಿ ಮತ್ತೆ ಯುದ್ಧ ಆಯ್ತು, ನೆಪೋಲಿಯನ್ ಬೋನಾಪಾರ್ಟ್ ಸೋತನು. ಆತನನ್ನು ಕೈದಿಯನ್ನಾಗಿ ಮಾಡಿ ಸೆಂಟ್ ಹೆಲೆನ್ ದ್ವೀಪದಲ್ಲಿ ಬಂದಿಖಾನೆಯಲ್ಲಿಟ್ಟಿದ್ದರು. ಇದರ ಅರ್ಥ ಸಂಪತ್ತು ಒಮ್ಮೆ ಅವರದಾದರೆ ಮತ್ತೊಮ್ಮೆ ಇವರದಾಗುತ್ತದೆ. ಅಂದರೆ ಯಾರದಾಗುತ್ತೋ ಹೇಳೋದಿಕ್ಕೆ ಬರುವುದಿಲ್ಲ.

ಈಗ ಅಂಗಡಿಯಿಂದ ಯಾವುದೇ ವಸ್ತು ಖರೀದಿಸಿದರು, ಆ ವಸ್ತುವಿಗೆ ಅಂಗಡಿಯವನು ವಾರಂಟಿ ಹೇಳುತ್ತಾನೆ. ಅಂದರೆ ಇಷ್ಟು ದಿನ ಬಾಳಿಕೆ ಬರುತ್ತದೆ ಅಂತ. ಆದರೆ ಅರ್ಥ ಆ ವಸ್ತುವಿಗೆ ನಾನು ಅಷ್ಟೇ ದಿನ ಮಾಲೀಕ. ಗ್ರಾಮೀಣ ಗಾದೆ ಅತ್ತೆಗೊಂದು ಕಾಲ, ಸೊಸೆಗೆ ಒಂದು ಕಾಲ. ಕಾಲಸರಿದಂತೆ ಮಾಲೀಕತ್ವ ಬದಲಾಗುತ್ತದೆ. ಅತ್ತೆ, ಸೊಸೆಯನ್ನು ಹುಡುಕಿ ತಂದು ಮಗನಿಗೆ ಮದುವೆ ಮಾಡುತ್ತಾಳೆ. ಆಕೆಯೇ ಮುಂದಿನ ಮಾಲೀಕಳು ಅನ್ನುತ್ತಾಳೆ. ಆದರೆ ಮಾಲೀಕತ್ವ ನೀಡಬೇಕು. ಆದರೆ ನೀಡಬೇಕೆನಿಸಿದಾಗ ಅಸಮಾಧಾನ ಉಂಟಾಗುತ್ತದೆ. ಪ್ರಸಂಗ ಬಂದಾಗ ಅದು ಉಳಿಯುವುದಿಲ್ಲ, ಅಂತ ತಲೆಯಲ್ಲಿ ಹಾಕಿಕೊಂಡಿದ್ದರೆ ಅಸಮಾ ಧಾನವಾಗುವುದಿಲ್ಲ.

ಯಾವುದೇ ಮಾಲೀಕತ್ವ ಇರಲಿ, ಈಗ ಸೌಂದರ್ಯ ಇದೆ. ಸೌಂದರ್ಯದ ಮಾಲೀಕ ನಾನು. ಆದರೆ ಎಷ್ಟು ದಿನ?. ಶಕ್ತಿಯ ಮಾಲೀಕ ನಾನು, ಎಷ್ಟು ದಿನ?. ಜನರ ಪ್ರೀತಿ ಗಳಿಸಿದ ಮಾಲೀಕ ನಾನು, ಎಷ್ಟು ದಿನ?. ಇದೆಲ್ಲಾ ಹೊಯ್ದಾಡೋ ಎಲೆಗಳು. ಗಾಳಿ ಬೀಸದಿದ್ದರೆ ನಿಂತಂಗೆ ಇರುತ್ತದೆ. ಒಂದೇ ಕಡೆ ಇರುತ್ತದೆ. ಗಾಳಿ ಬೀಸಿತು ಅಂದರೆ ಎಲೆಗಳ ಹೊಯ್ದಾಟ ಶುರುವಾ ಗುತ್ತದೆ. ಹಾಗೆ ಕಾಲದ ಗಾಳಿ ಬೀಸಿತು ಅಂದರೆ ನಮ್ಮ ವಸ್ತುಗಳು ಹೊಯ್ದಾಟ ಶುರುಮಾಡುತ್ತದೆ. ರಾಮಾಯಣದಲ್ಲಿ ಒಬ್ಬರಲ್ಲಿ ಇದ್ದ ವಸ್ತು ಬೇರೊಬ್ಬರಲ್ಲಿ ಹೊಯ್ದಾಡಿತ್ತು. ಯಾವುದೇ ಆಗಿರಲಿ ಎಲ್ಲಾ ಕಾಲಕ್ಕೂ ಒಬ್ಬರದಾಗಿ ಇರುವುದಿಲ್ಲ, ಇದೇ ಜಗತ್ತಿನ ವಿಸ್ಮಯ. ಇದನ್ನು ಸ್ಪಷ್ಟವಾಗಿ ತಿಳಿದಿದ್ದರೆ ತಲೆ ಸಮಾಧಾನದಿಂದ ಇರುತ್ತದೆ. ಯಾರು ಸರಿಯಾಗಿ ತಿಳಿದಿರುತ್ತಾನೋ ಆತ ಸಂಸಾರ ಸಾಗರದಲ್ಲಿ ತೇಲುತ್ತಾನೆ.

ಯಾವುದೇ ಇರಲಿ ಶಾಶ್ವತವಾಗಿ ನನ್ನದಾಗಿರುವುದಿಲ್ಲ ಅಂತ ಖಚಿತವಾಗಿ ಹಾಕಿಕೊಂಡಿರು ವುದು ನಿರ್ಮಮ. ಈ ಮಾತು ಮನಸ್ಸನ್ನು ಸ್ವಚ್ಛಗೊಳಿಸಿ ಸಮಾಧಾನ ಉಂಟುಮಾಡುತ್ತದೆ. ನಮ್ಮದಾಗೆ ಇರಬೇಕು. ಯಾವಾಗಲೂ ಇರಬೇಕು ಅನ್ನುವುದು ಈ ಜಗತ್ತಿನಲ್ಲಿ ಅಸಾಧ್ಯ. ಯಾವ ಸಾಮಾನು ? ಯಾವ ವ್ಯಕ್ತಿ?. ಯಾವಾಗ?. ನಮ್ಮದು ಯಾವಾಗ?. ನಮ್ಮದು ಯಾವಾಗ ಅಲ್ಲವೋ ಹೇಳಲಿಕ್ಕೆ ಬರದಂತಹ ಸ್ಥಿತಿ ಈ ಜಗತ್ತಿನೊಳಗೆ ಇದೆ. ವಸ್ತುಗಳನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆಯೊ ಹಾಗೆ ಜಗತ್ತು ನಮ್ಮನ್ನು ಬಳಸಿಕೊಳ್ಳುತ್ತದೆ. ನಾವು ಯಾವಾಗ ಎಲ್ಲಿಗೆ ಹೋಗುತ್ತೇವೆ ಅಂತ ನಮಗೆ ಗೊತ್ತಿಲ್ಲ, ಆದರೆ ನಾವು ತಿಳಿದುಕೊಳ್ಳುವುದು ಮಾಲೀಕ. ನಾನೇ ಹೌದು. ಆದರೆ ಖಾಯಂ ಮಾಲಿಕ ನಾವಲ್ಲ, ಹೊರಗೆ ಹೇಳುವಾಗ ನಾನೇ ಮಾಲೀಕ ಅಂತ ಹೇಳು. ಒಳಗೆ ನಿನ್ನೊಳಗೆ ಹೇಳಿಕೋ ನಾನು ಖಾಯಂ ಮಾಲೀಕ ಅಲ್ಲ ಅಂತ. ಉದಾ ಹರಣೆಗೆ, ನಮಗೆ ಪಿತ್ರಾರ್ಜಿತ ಆಸ್ತಿ ಅಂತ ಹೇಳುತ್ತೇವೆ. ನಮ್ಮ ತಂದೆ ತಾತನ ಹೆಸರಿನಲ್ಲಿತ್ತು ಅನ್ನುತ್ತೇವೆ. ಆದರೆ ಅವರ ಹಿಂದಿನ ಹೆಸರು ನಮಗೆ ಗೊತ್ತಿಲ್ಲ. ಅವರು ಕಾಯಂ ನನ್ನದೇ ಅಂದು ಕೊಂಡಿದ್ದರು. ಆದರೆ ಅವರು ಇಂದಿಲ್ಲ, ಆಸ್ತಿ ಇದೆ. ಮುಂದೆ ಬೇರೆಯವರು ಅದರ ಮಾಲೀಕರು ಆಗುತ್ತಾರೆ. ನಮ್ಮ ಹೆಸರು ಹೋಗುತ್ತದೆ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಗೊತ್ತಿರದಂತೆ ಬದುಕುತ್ತಿದ್ದೇವೆ ಇದಕ್ಕೆ ಮಾಯಾ ಎನ್ನುವರು. ಅದರಿಂದ ಅಸಮಾಧಾನ ಉಂಟಾಗುತ್ತದೆ ಅಲ್ಲವೆ? ಆದುದರಿಂದ ನಾವು ಯಾವುದೇ ವಸ್ತು, ವ್ಯಕ್ತಿ, ಸಂಗತಿ ಮತ್ತು ವಿಚಾರಗಳಿಗೆ ಅತಿಯಾಗಿ ಅಂಟಿಕೊಳ್ಳಬಾರದು ಅಲ್ಲವೇ..?

**-ಎಂ.ಪಿ.ಜ್ಞಾನೇಶ್, ಮಂಗಳೂರು**

# ಹಬ್ಬಗಳು ಕುಟುಂಬ-ಸಮುದಾಯಗಳ ಬಾಂಧವ್ಯ ವೃದ್ಧಿಗೆ ಸಹಕಾರಿ

• ಪ್ರಜೋದಯ ವರದಿ

**ಅರಕಲಗೂಡು:** ಸಾಮಾಜಿಕ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಸಾರುವ ಮುಖ್ಯ ಸಂಪ್ರದಾಯವಾಗಿರುವ ಭಾರತೀಯ ಹಬ್ಬಗಳು ಸಮಾಜದಲ್ಲಿ ಪ್ರೀತಿಯನ್ನು ಹರಡುವ ಸಾಧನವಾಗಿದೆ ಎಂದು ಕೊಡಗು ವಿಶ್ವವಿದ್ಯಾಲಯದ ಕನ್ನಡ ಉಪನ್ಯಾಸಕ ಡಾ.ಜಮೀರ್ ಅಹಮದ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮೈಸೂರಿನ ಶ್ರೀರಾಮಪುರದ ಕ್ರೈಸ್ಟ್ ಕಾಲೇಜು ವತಿಯಿಂದ ರಾಮನಾಥಪುರ ಹೋಬಳಿಯ ಲಕ್ಕೂರು ಗ್ರಾಮದಲ್ಲಿ ಹಮ್ಮಿಕೊಂಡಿರುವ ವಾರ್ಷಿಕ ವಿಶೇಷ ಶಿಬಿರ-2026ರ ಪ್ರಯುಕ್ತ ಹಬ್ಬಗಳು-ಸಹೋದರತ್ವ ಮತ್ತು ಏಕತೆಯ ಸಂಕೇತ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಹಬ್ಬಗಳು ಕುಟುಂಬ ಮತ್ತು ಸಮು ದಾಯಗಳ ನಡುವಿನ ಬಾಂಧವ್ಯವನ್ನು ವೃದ್ಧಿಗೊಳಿಸುತ್ತವೆ. ವೈವಿಧ್ಯತೆ ಯಲ್ಲಿ ಏಕತೆಯನ್ನು ರೂಪಿಸುತ್ತವೆ. ಜಾತಿ-ಧರ್ಮದ ಗಡಿಯನ್ನು ಮೀರಿ ಜೊತೆಗೂಡಿ ಆಚರಣೆ ಮಾಡುವುದು ಸಾಮಾನ್ಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಕಾಣಬಹುದು. ಹಬ್ಬಗಳು ಸಾಂಸ್ಕೃತಿಕ ಮೌಲ್ಯಗಳನ್ನು ಮುಂದಿನ ತಲೆಮಾರುಗಳಿಗೆ ಹಸ್ತಾಂತರಿಸುವ ಸಾಧನವಾಗಿವೆ.

ಎಳ್ಳು ಬೆಲ್ಲ ತಿದ್ದು ಒಳ್ಳೆಯ ಮಾತು ಹೇಳು ಎಂದು ಹೇಳುವುದರ ಮೂಲಕ ದ್ವೇಷ ಮರೆತು ಸ್ನೇಹ ಬೆಳೆಸುವುದು ಮುಖ್ಯ ಉದ್ದೇಶವನ್ನು ಮಕರ ಸಂಕ್ರಾಂತಿ ಹೊಂದಿದೆ. ಹಬ್ಬದ ದಿನ ಮಕ್ಕಳು ಮತ್ತು ಬಂಧುಗಳು ಮನೆ-ಮನೆಗಳಲ್ಲಿ ಎಳ್ಳು ಬೆಲ್ಲ ಹಂಚಿ, ಜಗಳ-ವೈರತ್ವಗಳನ್ನು ಮರೆತು ಒಗ್ಗಟ್ಟು ಸೃಷ್ಟಿಸುತ್ತಾರೆ. ದಾನ ಮತ್ತು ಹಂಚಿಕೆಯಿಂದ ಪುಣ್ಯ ಫಲ ದೊರೆಯುತ್ತದೆ ಎಂದರು.

ಸಂಗಮೇಶ್ವರ ಸಮಿತಿ ಅಧ್ಯಕ್ಷ ಹಿರಣ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತ ನಾಡಿ, ಅಜ್ಞಾನದ ಮೇಲೆ ಜ್ಞಾನದ ಜಯವನ್ನು ಸಾಧಿಸುವ, ಪ್ರೀತಿ ಮತ್ತು ಸೌಹಾರ್ದತೆಯನ್ನು ಪಸರಿಸುವ ವಿಶೇಷತೆಯನ್ನು ಭಾರತೀಯ ಹಬ್ಬಗಳು ಹೊಂದಿವೆ ಎಂದು ತಿಳಿಸಿದರು.

ಸಂಗಮೇಶ್ವರ ಸಮಿತಿ ಉಪಾಧ್ಯಕ್ಷರಾದ ಎಲ್.ಎನ್.ಮೋಹನ, ಕಾರ್ಯದರ್ಶಿ ಎಲ್.ಜಿ.ಅನಂತರಾಜು, ನಿರ್ದೇಶಕರಾದ ಗಣೇಶ ನಾಯಕ, ಯೋಗನರಸಿಂಹ, ಎಲ್.ಡಿ. ಜವರೇಗೌಡ, ಮುಖಂಡರಾದ ಚಂದ್ರೇಗೌಡ, ತಿಮ್ಮಯ್ಯ, ಶಿವರಾಮೇಗೌಡ, ಗ್ರಾಮದ ಯುವಕರು, ಎನ್‌ಎಸ್‌ಎಸ್ ಶಿಬಿರಾಧಿಕಾರಿ ಕೆ.ಎ.ವೇದರಾಜು, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಬಿ.ಬಿ.ಸೌಬಿಯಾ, ಶಶಿಕಿರಣ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ದೇಶಿಯ ಟೂರ್ನಿಯಲ್ಲಿ ಶುಭಮನ್ ಗಿಲ್ ಕಣಕ್ಕೆ

• ಪ್ರಜೋದಯ ವರದಿ

**ನವದೆಹಲಿ:** ನ್ಯೂಜಿಲೆಂಡ್ ವಿರುದ್ಧ ಭಾನುವಾರ ಮುಕ್ತಾಯಗೊಂಡ 3 ಪಂದ್ಯಗಳ ಏಕದಿನ ಸರಣಿ ಯನ್ನು 1-2ರ ಅಂತರದಲ್ಲಿ ಸೋತ ಬಳಿಕ, ಟೀಂ ಇಂಡಿಯಾ ಏಕದಿನ ಹಾಗೂ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್ ಅವರುರಣಜಿಟ್ರೋಫಿಯಲ್ಲಿಪಂಜಾಬ್ ಪರ ಆಡಲು ನಿರ್ಧರಿಸಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯ ಬಳಿಕ ವಿಶ್ರಾಂತಿ ತೆಗೆದುಕೊಳ್ಳಲು ಮುಂದಾಗದ ಶುಭಮನ್ ಗಿಲ್ ಅವರು, ಜ.22ರ (ಗುರುವಾರ) ರಾಜ್‌ಕೋಟ್‌ನಲ್ಲಿ ಸೌರಾಷ್ಟ್ರ ವಿರುದ್ಧ ಆರಂಭವಾಗಲಿರುವ ಪಂದ್ಯದಲ್ಲಿ ಪಂಜಾಬ್ ಪರ ಕಣಕ್ಕಿಳಿಯಲಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಯ ಮೂರೂ ಪಂದ್ಯಗಳಲ್ಲಿ ಗಿಲ್ ಆಡಿದ್ದರು. ಆದರೆ ಬಿಳಿ ಚೆಂಡಿನ ಕ್ರಿಕೆಟ್‌ನಿಂದ ತಕ್ಷಣ ದೀರ್ಘಾವಧಿ ಕ್ರಿಕೆಟ್‌ಗೆ ಮರಳಲು ಅವರು ಬಯಸಿದ್ದಾರೆ. 26 ವರ್ಷ ವಯಸ್ಸಿನ ಗಿಲ್ ಅವರು ಭಾರತದ ಟಿ-20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿಲ್ಲ.

ರಣಜಿ ನಾಕೌಟ್‌ಗೆ ಪ್ರವೇಶಿಸುವ ಪಂಜಾಬ್ ಹಾದಿ ಜೀವಂತವಾಗಿದ್ದರೂ, ಕಠಿಣವಾಗಿದೆ. ಬಿ ಗುಂಪಿನಲ್ಲಿರುವ ಪಂಜಾಬ್ 5 ಪಂದ್ಯಗಳಿಂದ 6 ಅಂಕ ಗಳಿಸಿದ್ದು, ಸದ್ಯ ಆರನೇ ಸ್ಥಾನದಲ್ಲಿದೆ.

ಇನ್ನು ಮೂರು ಪಂದ್ಯಗಳು ಆಡಲು ಉಳಿದಿದ್ದು, ಮೂರರಲ್ಲಿ ಜಯಗಳಿಸಿದರೆ ಪಂಜಾಬ್ ರೇಸ್‌ನಲ್ಲಿ ಉಳಿಯಲಿದೆ. ಅಸ್ಥಿರ ಆಟವಾಡುತ್ತಿರುವ ಪಂಜಾಬ್ ತಂಡಕ್ಕೆ ಗಿಲ್ ಪುನರಾಗಮನ ಮಹತ್ವದ್ದಾಗಲಿದೆ.

## ಎವಿಕೆ ಕಾಲೇಜು ಗೊಂದಲಕ್ಕೆ ತೆರೆ: ಹಳೆ ತಂಡ ಮುಂದುವರಿಕೆ

» ಮೊದಲನೇ ಪುಟದಿಂದ

ಈ ತೀರ್ಮಾನದ ನಂತರ ವಿದ್ಯಾರ್ಥಿಗಳು ಹಾಗು ಪೋಷಕರು ಪ್ರತಿಭಟನೆಯನ್ನು ಹಿಂಪಡೆದು ತರಗತಿಗಳಿಗೆ ಹಾಜರಾಗಿದ್ದಾರೆ.

ಅವಧಿ ಮುಗಿಯುವವರೆಗೂ ಇದೇ ಪ್ರಾಂಶುಪಾಲರು ಹಾಗು ಉಪನ್ಯಾಸಕರು ಕರ್ತವ್ಯ ನಿರ್ವಹಿಸಲಿದ್ದು, ಮುಂದಿನ ದಿನಗಳಲ್ಲಿ ಆಡಳಿತ ಮಂಡಳಿ ಮತ್ತೊಂದು ಸಭೆ ಕರೆದು ಎಲ್ಲರ ಒಮ್ಮತದಂತೆ ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದೆ ಎಂದು ತಿಳಿದು ಬಂದಿದೆ. ಈ ತೀರ್ಮಾನದಿಂದ ಕಾಲೇಜಿನ ಶೈಕ್ಷಣಿಕ ವಾತಾವರಣ ಮತ್ತೆ ಸಹಜ ಸ್ಥಿತಿಗೆ ಮರಳಿದ್ದು, ವಿದ್ಯಾರ್ಥಿಗಳು ನಿಟ್ಟುಸಿರು ಬಿಡುವಂತಾಗಿದೆ.

## ಕಿಡಿಗೇಡಿಗಳಿಂದ ಬೈಕ್‌ಗೆ ಬೆಂಕಿ, ಮನೆಗೆ ಹಾನಿ

• ಪ್ರಜೋದಯ ವರದಿ



**ಹಾಸನ:** ಮನೆಯ ಮುಂದೆ ನಿಲ್ಲಿಸಿದ್ದ ಎರಡು ಬೈಕ್‌ಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ. ಆ ಬೆಂಕಿ ಮನೆಗಳಿಗೂ ವ್ಯಾಪಿಸಿ ಹಾನಿಯುಂಟಾಗಿರುವ ಘಟನೆ ಆದರ್ಶ ನಗರದಲ್ಲಿ ಸೋಮ ವಾರ ನಸುಕಿನ ಜಾವ ನಡೆದಿದೆ. ಕಿಡಿಗೇಡಿಗಳು ಹಚ್ಚಿದ ಬೆಂಕಿಗೆ ನಯಾಜ್‌ಉಲ್ಲಾ ಹಾಗು ಫೈರೋಜ್ ಪಾಷಾ ಅವರಿಗೆ ಸೇರಿದ ಎರಡು ಬೈಕ್, ಎರಡು ಮನೆಗೆ ಹಾನಿ ಯುಂಟಾಗಿದೆ.

ನಸುಕಿನ ಜಾವ 3 ಗಂಟೆ ಸಮಯದಲ್ಲಿ ಮನೆ ಮುಂಭಾಗ ನಿಲ್ಲಿಸಿದ್ದ ಬೈಕ್‌ಗಳಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಮನೆಯೊಳಗೆ ಮಲಗಿದ್ದವರು ಬೆಚ್ಚಿಬಿದ್ದಿದ್ದಾರೆ. ಬೆಂಕಿ ಉರಿಯುತ್ತಿರುವುದನ್ನು ಗಮನಿಸಿ ಹಿಂಬಾಗಿಲು ಮೂಲಕ ಹೊರಗೆ ಓಡಿ ಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಮನೆಗಳಲ್ಲಿದ್ದ ಸುಮಾರು 12 ಮಂದಿ ಅಪಾಯದಿಂದ ತಪ್ಪಿಸಿಕೊಂಡಿದ್ದು, ದೊಡ್ಡ ಅನಾಹುತ ತಪ್ಪಿದಂತಾಗಿದೆ.

ಬೆಂಕಿಯ ಅವಘಡದಿಂದ ಮನೆಗಳೊಳಗಿದ್ದ ಟಿವಿ, ಗೃಹೋಪಯೋಗಿ ವಸ್ತುಗಳು, ಅಗತ್ಯ ದಾಖಲೆಗಳು ಸೇರಿ ಹೊರಗೆ ನಿಲ್ಲಿಸಿದ್ದ ಎರಡು ಬೈಕ್‌ಗಳು ಸಂಪೂರ್ಣವಾಗಿ ಬೆಂಕಿಗಾಹುತಿಯಾಗಿವೆ. ಘಟನೆಯಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಬೆಂಕಿ ಕಾಣಿಸಿಕೊಂಡ ತಕ್ಷಣ ಎದುರು ಮನೆಯ ನಿವಾಸಿ ಸತೀಶ್ ಅವರು ಅಗ್ನಿಶಾಮಕ ದಳ ಹಾಗು ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಆಗಮಿಸುವಷ್ಟರಲ್ಲಿ ಸ್ಥಳೀಯರು ನೀರು ಹಾಕಿ ಬೆಂಕಿ ನಂದಿಸಿದ್ದು, ಅಗ್ನಿಶಾಮಕ ಸಿಬ್ಬಂದಿಯವರು ಸ್ಥಳ ಪರಿಶೀಲನೆ ನಡೆಸಿ ಮತ್ತಷ್ಟು ಅಪಾಯವಾಗುವುದನ್ನು ತಪ್ಪಿಸಿದ್ದಾರೆ.

ಮಾಹಿತಿ ಪಡೆದ ತಕ್ಷಣ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ಆರಂಭಿಸಿದ್ದಾರೆ. ನಗರದಲ್ಲಿ ಇಂತಹ ಕಿಡಿಗೇಡಿಗಳ ಕೃತ್ಯಗಳು ಮರುಕಳಿಸುತ್ತಿರುವುದರಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಪೊಲೀಸರನ್ನು ಒತ್ತಾಯಿಸಿದ್ದಾರೆ.

# ಖಾಲಿ ನಿವೇಶನಗಳಲ್ಲಿ ತ್ಯಾಜ್ಯಗಳ ಆಗರ, ನಿವಾಸಿಗಳಿಗೆ ತೊಂದರೆ

-ರವಿ ದುಮ್ಮಿ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಖಾಲಿ ನಿವೇಶನಗಳಲ್ಲಿ ತ್ಯಾಜ್ಯಗಳ ಆಗರವಾಗಿದ್ದು, ಅಕ್ಕ-ಪಕ್ಕದಲ್ಲಿ ವಾಸ ಮಾಡುತ್ತಿರುವ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಇಂತಹ ನಿವೇಶನದಾರರು ಸ್ವಚ್ಛತೆ ಕೈಗೊಳ್ಳುವ ನಿಟ್ಟಿನಲ್ಲಿ ಪಟ್ಟಣ ಪಂಚಾಯಿತಿ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದ್ದಾರೆ.





ಪಟ್ಟಣ ಪಂಚಾಯಿತಿನ 17 ವಾರ್ಡ್‌ಗಳಲ್ಲಿ ವಾಸ ಮಾಡುತ್ತಿರುವ ಜನ ವಸತಿ ಪ್ರದೇಶದಲ್ಲಿ ನೂರಾರು ಖಾಲಿ ನಿವೇಶನಗಳಿದ್ದು, ಇವುಗಳಲ್ಲಿ ಗಿಡಗಂಟಿಗಳು ಹೇರಳವಾಗಿ ಬೆಳೆದಿವೆ. ಹಾವುಗಳು, ಇಲಿ ಹೆಗ್ಗಣಗಳ ವಾಸ ಸ್ಥಳವಾಗಿಲ್ಲದೇ ಖಾಲಿ ಜಾಗದಲ್ಲಿ ಅನಗತ್ಯ ತ್ಯಾಜಗಳನ್ನು ಬಿಸಾಡುತ್ತಿರುವುದು ಕೂಡ ಮಲೀನತೆ ಹರಡಲು ಪ್ರಮುಖ ಕಾರಣವಾಗುತ್ತಿದೆ.

ನಿತ್ಯವೂ ಪಟ್ಟಣ ಪಂಚಾಯಿತಿ ಪೌರ ಕಾರ್ಮಿಕ ಸಿಬ್ಬಂದಿಗಳು ಪಟ್ಟಣದ ಮುಖ್ಯ ರಸ್ತೆ ಹಾಗೂ ಕೆಲವು ವಾರ್ಡ್‌ಗಳಲ್ಲಿ ಮಾತ್ರ ಸ್ವಚ್ಛತೆ ಮತ್ತು ಕಸ ಸಂಗ್ರಹಣೆ ಮಾಡುತ್ತಾರೆ. ಉಳಿದ ವಾರ್ಡ್‌ಗಳಲ್ಲಿ ವಾರಕ್ಕೆ 2-3 ದಿನ ಕಸಸಂಗ್ರಹಣೆ ನಡೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಖಾಲಿ ನಿವೇಶನಗಳಲ್ಲಿನ ತ್ಯಾಜ್ಯ ಅಕ್ಕಪಕ್ಕದ ನಿವಾಸಿಗಳಿಗೆ ಮಾರಕವಾಗಿ ಪರಿಣಮಿಸಿದೆ.

ಪೌರಕಾರ್ಮಿಕ ಸಿಬ್ಬಂದಿಗಳು ಜನ ವಸತಿ ಪ್ರದೇಶದಲ್ಲಿ ಮಾತ್ರ ಸ್ವಚ್ಛತೆ ಹಾಗೂ ಕಸ ಸಂಗ್ರಹಣೆ ಮಾಡುತ್ತಾರೆ. ಆದರೆ ಖಾಲಿ ನಿವೇಶನಗಳ ಸ್ವಚ್ಛತೆಯನ್ನು ಕೈಗೊಳ್ಳುವುದಿಲ್ಲ. ನಿವೇಶನದಾರರೇ ತಮ್ಮ ಖಾಲಿ ನಿವೇಶನಗಳಲ್ಲಿನ ತ್ಯಾಜ್ಯ, ಕಸವನ್ನು ಸ್ವಚ್ಛಗೊಳಿಸಬೇಕಿದೆ. ಈ ಬಗ್ಗೆ ನಿರ್ಲಕ್ಷ್ಯತೆ ವಹಿಸುತ್ತಿರುವುದು ತ್ಯಾಜ್ಯ ಹೇರಳವಾಗಿ ಬೆಳೆಯಲು ಸಾಧ್ಯವಾಗಿದೆ ಎನ್ನಬಹುದು.

**ಜನವಸತಿ, ಅಂಗಡಿಗಳ ತ್ಯಾಜ್ಯ ನಿವೇಶನ, ಚರಂಡಿ ಪಾಲು**

ಪೌರಕಾರ್ಮಿಕರು ಮುಂಜಾನೆಯೇ ಪಟ್ಟಣದ ಸ್ವಚ್ಛತೆಯನ್ನು ಕೈಗೊಳ್ಳುತ್ತಾರೆ. ಆದರೆ ಅಂಗಡಿ ಮುಂಗಟ್ಟುಗಳ ವರ್ತಕರು 9 ಗಂಟೆ ನಂತರದಲ್ಲಿ ಅಂಗಡಿಗಳ ಬಾಗಿಲು ತೆಗೆಯುತ್ತಾರೆ. ಬಾಗಿಲು ಮುಚ್ಚುವುದು ರಾತ್ರಿ 9ರಿಂದ10 ಗಂಟೆಯಾಗುತ್ತದೆ. ಈ ಅವಧಿಯಲ್ಲಿ ಉತ್ಪಾದನೆ ಯಾಗುವ ತ್ಯಾಜ್ಯವನ್ನು ಪಟ್ಟಣ ಪಂಚಾಯಿತಿ ಗಾಡಿಗಳಿಗೆ ಹಾಕಲು ಸಾಧ್ಯವಾಗುವುದಿಲ್ಲ.ಕೆಲವರು ಚೀಲ ಅಥವಾ ಪ್ಲಾಸ್ಟಿಕ್‌ನಲ್ಲಿ ಕಟ್ಟಿ ಅಂಗಡಿ ಮುಂದೆ ಇಟ್ಟು ತೆರಳುತ್ತಾರೆ. ಮತ್ತೆ ಕೆಲವರು ಖಾಲಿ ಬಿದ್ದಿರುವ ನಿವೇಶನ ಮತ್ತು ಚರಂಡಿಗೆ ಹಾಕುತ್ತಿರುವುದೇ ತ್ಯಾಜ್ಯ ರಸ್ತೆ, ಚರಂಡಿ ಪಾಲಾಗುತ್ತಿದೆ. ಇದು ಸ್ವಚ್ಛತೆ ಕೈಗೊಳ್ಳುವ ಪೌರ ಸಿಬ್ಬಂದಿಗಳಿಗೆ ಸಮಸ್ಯೆಯಾಗಿ ಪರಿಣಮಿಸುತ್ತಿದೆ .

**ದಂಡವಿಧಿಸಿ**

ಜನ ವಸತಿ ಪ್ರದೇಶದಲ್ಲಿನ ಖಾಸಗಿ ವ್ಯಕ್ತಿಗಳ ಖಾಲಿ ಜಾಗ ಮತ್ತು ನಿವೇಶನಗಳ ಸ್ವಚ್ಛತೆ ಕೈಗೊಳ್ಳದ ಮಾಲೀಕರಿಗೆ ದಾಖಲೆ ಪರಿಶೀಲನೆ ಮಾಡಿ ನೋಟೀಸ್ ನೀಡಿ ಸ್ವಚ್ಛಗೊಳಿಸುವಂತೆ ತಿಳುವಳಿಕೆ ನೀಡಬೇಕು. ಅದಕ್ಕೆ ಸ್ಪಂದಿಸದವರ ವಿರುದ್ಧ ದಂಡ ವಿಧಿಸುವ ನಿಟ್ಟಿನಲ್ಲಿ ಪಟ್ಟಣ ಪಂಚಾಯಿತಿ ಮುಂದಾಗಬೇಕೆಂಬುದು ನಿವಾಸಿಗಳ ಆಗ್ರಹವಾಗಿದೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಖಾಸಗಿ ಸರ್ವೇ ನಂಬರ್ ಜಾಗಗಳು ಹೊಸದಾಗಿ ಲೇಔಟ್‌ಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಇಲ್ಲಿ ಇನ್ನೂ ಮನೆಗಳು ನಿರ್ಮಾಣಗೊಂಡಿಲ್ಲ, ಹಾಲಿ ವಾಸ ಮಾಡುತ್ತಿರುವ ಜನ ವಸತಿ ಪ್ರದೇಶದಲ್ಲಿನ ಖಾಲಿ ನಿವೇಶನಗಳಿಂದ ಸಾಕಷ್ಟು ಪರಿಸರ ಮಾಲಿನ್ಯ ಜನರಿಗೆ ಉಂಟಾಗುತ್ತಿದೆ. ಒಮ್ಮೆ ಪರಿಸರ ಕಾಳಜಿಯಿಂದ ಎಚ್ಚರಿಕೆ ಕ್ರಮ ಕೈಗೊಂಡರೇ ಮುಂದೆ ಸರಿಯಾಗುವ ಸಾಧ್ಯತೆ ಸ್ವಯಂ ಖಾಲಿ ನಿವೇಶನದಾರರಿಂದ ಆಗಬಹುದಾಗಿದೆ.

**ಕಸ ಎಸೆಯುವಿಕೆ**

ಬಹುತೇಕ ಮಂದಿ ಮುಂಜಾನೆ ವಾಕ್ ಬರುವ ವೇಳೆ ಮನೆಯಿಂದಲೇ ಕಸ ಸಂಗ್ರಹಣೆ ಮಾಡಿರುವ ಕವರ್‌ಗಳನ್ನು ಹಿಡಿದುಕೊಂಡು ಬಂದು ಖಾಲಿ ಜಾಗದಲ್ಲಿ ಬಿಸಾಡುತ್ತಿರುವುದು ಕಂಡುಬಂದಿದೆ. ಪ್ರಮುಖವಾಗಿ ಕೋಟೆ-ಪೇಟೆ ಬೈಪಾಸ್ ರಸ್ತೆಯ ಎರಡು ಬದಿಯಲ್ಲಿ ಈ ರೀತಿ ಕಸವನ್ನು ಕವರ್‌ನಲ್ಲಿ ಬಿಸಾಡುತ್ತಿರುವುದು ನಡೆಯುತ್ತಿದೆ. ಇದೇ ರೀತಿ ಜನ ವಸತಿ ಪ್ರದೇಶದಲ್ಲಿನ ಖಾಲಿ ನಿವೇಶನಕ್ಕೂ ಕಸ ಹಾಕುವುದು ಸರ್ವೇ ಸಾಮಾನ್ಯವಾಗಿದೆ. ಪಟ್ಟಣ ಪಂಚಾಯಿತಿ ಗಾಡಿ ಮನೆಯ ಬಳಿ ಬರುವುದನ್ನು ಕಾಯ್ದು ಕಸ ಹಾಕುವುದು ಇಳಿತು. ಇಲ್ಲವಾದರೇ ಮನೆಯ ಮುಂದೆ ಕಸ ತುಂಬಿದ ಡಬ್ಬಿಯನ್ನು ಕೆಲಸಕ್ಕೆ ತೆರಳಿದರೇ ಕಸದ ಗಾಡಿ ಯವನ್ನು ಕಸವನ್ನು ಸಂಗ್ರಹಣೆ ಮಾಡಲು ಸಹಾಯವಾಗುತ್ತದೆ. ಈ ನಿಟ್ಟಿನಲ್ಲಿ ನಿವಾಸಿಗಳು ಮುಂದಾಗಬೇಕಿದೆ.

**ಪಟ್ಟಣ ಪಂಚಾಯಿತಿಯಲ್ಲಿ ಅಗತ್ಯ ಪೌರ ಕಾರ್ಮಿಕರ ಕೊರತೆ ಇದ್ದರೂ ಕೂಡ ನಿತ್ಯವೂ ಆರೇಳು ಗಾಡಿ ಮಿನಿ ಟಿಪ್ಪರ್ ಹಾಗೂ ನಾಲ್ಕೈದು ಬಾರಿ ಟ್ರ್ಯಾಕ್ಟರ್ ಗಾಡಿ ಕಸವನ್ನು ಸಂಗ್ರಹಿಸಲಾಗುತ್ತಿದೆ. ಜನ ವಸತಿ ಪ್ರದೇಶದ ಸ್ವಚ್ಛತೆಯನ್ನು ಸಹ ನಿರ್ವಹಿಸಲಾಗುತ್ತಿದೆ. ಜನರು ಯಾವುದೇ ಕಾರಣಕ್ಕೂ ಖಾಲಿ ಜಾಗದಲ್ಲಿ ಕಸವನ್ನು ಹಾಕುವ ಬದಲು ನಮ್ಮ ಗಾಡಿಗಳಿಗೆ ಹಾಕಬೇಕಿದೆ. ಖಾಲಿ ನಿವೇಶನಗಳಲ್ಲಿ ಹೇರಳವಾಗಿ ತ್ಯಾಜ್ಯ ಬೆಳೆದಿರುವುದು ಪರಿಸರಕ್ಕೆ ಮಾರಕ ವಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಮುಖ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಲಾಗುವುದು.**

**-ಚೇತನ್‌ಕುಮಾರ್,** ಆರೋಗ್ಯ ನಿರೀಕ್ಷಕ, ಪಟ್ಟಣ ಪಂಚಾಯಿತಿ ಅರಕಲಗೂಡು

**ಪಟ್ಟಣದ ಪೌರಕಾರ್ಮಿಕರು ತಮ್ಮ ಆರೋಗ್ಯವನ್ನು ಲೆಕ್ಕಿಸದೇ ಪಟ್ಟಣದ ಸ್ವಚ್ಛತೆಯನ್ನು ಕೈಗೊಳ್ಳುತ್ತಾರೆ. ನಿತ್ಯದ ಕಸವನ್ನು ಸಕರಾತ್ಮಕವಾಗಿ ಜನರು ನಿರ್ವಹಣೆ ಮಾಡಿದರೇ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಖಾಲಿ ನಿವೇಶನದಾರರು. ಅಂಗಡಿ ಮಾಲೀಕರು ಕೂಡ ಕಸವನ್ನು ಗಾಡಿಗಳಿಗೆ ಹಾಕುವ ನಿಟ್ಟಿನಲ್ಲಿ ಮುಂದಾಗಬೇಕಿದೆ.**

**-ಶಂಕರಯ್ಯ, ಮಾಜಿ ಪಟ್ಟಣ ಪಂಚಾಯಿತಿ ಸದಸ್ಯ**

# ಶಿವಲಿಂಗೇಗೌಡ ವಿರುದ್ಧ ಯಾರೇ ಸ್ಪರ್ಧಿಸಿದರೂ ಸೋಲು

» ಮೊದಲನೇ ಪುಟದಿಂದ

ಮಾಡುವುದು ಸರಿಯಲ್ಲ. ಶಿವಲಿಂಗೇಗೌಡ ಅವರು ತಂದೆಯಂತೆಯೇ ಸಣ್ಣ ವೃತ್ತಿ ಮಾಡಿ ಮೇಲೆ ಬಂದವರು, ಅವರ ಬಗ್ಗೆ ಟೀಕೆ ಮಾಡುವುದು, ಹೀಯಾಳಿಸುವುದು ಸಣ್ಣತನ. ಸಣ್ಣವರು ದೊಡ್ಡವರ ಬಗ್ಗೆ ಮಾತನಾಡುವಾಗ ಯೋಚಿಸಬೇಕು. ಮಾತಿನ ಮೇಲೆ ಹಿಡಿತ ಇರಲಿ, ಜಿಲ್ಲೆಯನ್ನು ಕಾಂಗ್ರೆಸ್ ಮುಕ್ತ ಮಾತು, ಕನಸು. ಅರಸೀಕೆರೆಯಲ್ಲಿ ಕಾಂಗ್ರೆಸ್ ಬಲಿಷ್ಠ ಆಗಿದೆ, ಮುಂದೆಯೂ ಶಿವಲಿಂಗೇಗೌಡ ಅವರೇ ಗೆಲ್ಲುತ್ತಾರೆ. ಅರಸೀಕೆರೆ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕಾಮಗಾರಿಗಳನ್ನು ಯಾರು ಮಾಡಿದ್ದಾರೆಂಬುದನ್ನು ಜೆಡಿಎಸ್‌ನವರು ಶ್ವೇತಪತ್ರ ಬಿಡುಗಡೆ ಮಾಡಲಿದೆ ಎಂದು ಸವಾಲು ಹಾಕಿದರು.

**ಸಚಿವ ಸ್ಥಾನದ ಭರವಸೆ**

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಅವರು ಮಾತನಾಡಿ, ಶಾಸಕರ ವಿರುದ್ಧ ಏಕವಚನ ಪದ ಬಳಕೆ ಅವರ ಸಂಸ್ಕೃತಿ, ಸಂಕುಚಿತ ಭಾವನೆ ತಿಳಿಸಲಿದೆ. ಕ್ಷೇತ್ರದಲ್ಲಿ 4 ಬಾರಿ ಗೆಲುವು ಹುಡುಗಾಟ ಅಲ್ಲ, ಶಿವಲಿಂಗೇಗೌಡರ ಗರಡಿಯಲ್ಲಿ ಬೆಳೆದವರು ಕೀಳು ಮಟ್ಟದ ರಾಜಕೀಯ ಮಾಡುವುದು ಬೇಡ. ಅವರನ್ನು ಒಪ್ಪಿ ಕಾಂಗ್ರೆಸ್‌ಗೆ ಬರ ಮಾಡಿಕೊಂಡಿದ್ದೇವೆ, ಅರಸೀಕೆರೆ ಶಾಂತಿಯ ತೋಟ, ರೇವಣ್ಣ ಅವರನ್ನು ಕರೆದು ನಿಲ್ಲಿಸಿ ಅಭ್ಯಂತರ ಇಲ್ಲ. ಆದರೆ, ನಮ್ಮ ಶಾಸಕರಿಗೆ ದೊಡ್ಡ ಬೆಂಬಲ ಇದೆ. ಅವರನ್ನು ಸೋಲಿಸಲು ಆಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮಂತ್ರಿ ಮಾಡುವ ಭರವಸೆ ನೀಡಿದ್ದಾರೆ, ಸಚಿವರಾಗುವ ಭರವಸೆ ಇದೆ ಎಂದು ತಿಳಿಸಿದರು.

ಗಂಜಿಗೆರೆ ಚಂದ್ರಶೇಖರ್ ಅವರು ಮಾತನಾಡಿ, ರೇವಣ್ಣ ಅವರು ಮಾಜಿ ಪ್ರಧಾನಿಯ ಮನೆಯವರು. ಅವರು ರಾಜ್ಯದ ಬೇರೆ ಕಡೆ ನಿಲ್ಲಲಿ, ಅರಸೀಕೆರೆಯೇ ಏಕೆ ಬೇಕೆಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಅವರೇ ಬಂದರೂ ಶಿವಲಿಂಗೇಗೌಡರ ಸೋಲು ಅಸಾಧ್ಯ, ರೇವಣ್ಣ ಅವರನ್ನು ಕರೆಯುತ್ತಿರುವವರಿಗೆ, ಅವರೇ ಸ್ಪರ್ಧೆ ಮಾಡಲು ತಾಕತ್ತು ಇಲ್ಲವೇ ಎಂದು ಪ್ರಶ್ನಿಸಿದರು. ಮುಖಂಡರಾದ ವೆಂಕಟೇಶ, ಉಮೇಶ್, ವೆಂಕಟಮುನಿ ಇದ್ದರು.

# ಗೌತಮಿ ನಾಯಕ್ ಬ್ಯಾಟಿಂಗ್: ಗುಜರಾತ್‌ಗೆ ಸವಾಲಿನ ಗುರಿ

• ಪ್ರಜೋದಯ ವರದಿ

**ವಡೋದರ:** ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್‌ನ 12ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 178 ರನ್ ಕಲೆಹಾಕಿದೆ.

ಆರಂಭಿಕ ಆಘಾತದ ಹೊರತಾಗಿಯೂ,ಮಧ್ಯಮ ಕ್ರಮಾಂಕದ ಬ್ಯಾಟರ್ ಗೌತಮಿ ನಾಯಕ್ (73 ರನ್, 55 ಎ, 7 ಬೌಂಡರಿ ಹಾಗೂ 1 ಸಿಕ್ಸರ್) ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ 178 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು.

ನಾಯಕಿ ಸ್ಮೃತಿ ಮಂಧಾನ (26 ರನ್) ರಿಚಾ ಘೋಷ್ (27 ರನ್) ಹಾಗೂ ರಾಧಾ ಯಾದವ್ (17) ರನ್ ಗಳಿಸಿ ತಂಡದ ಮೊತ್ತವನ್ನು 170ರ ಗಡಿ ದಾಟಿಸಿದರು.

ಗುಜರಾತ್ ಜೈಂಟ್ಸ್ ಪರ ಕಾಶ್ವೀ ಗೌತಮ್, ಆಶ್ಲೀ ಗಾರ್ಡ್ನರ್ ತಲಾ 2 ವಿಕೆಟ್ ಪಡೆದು ಮಿಂಚಿದರು.



ಸೋಫಿ ಡಿವೈನ್ ಹಾಗೂ ರೇಣುಕಾ ಸಿಂಗ್ ಠಾಕೂರ್ ಒಂದೊಂದು ವಿಕೆಟ್ ಪಡೆದುಕೊಂಡರು.

# ಪ್ರವೇಶ ಪತ್ರ ನಿರಾಕರಣೆ: ವಿದ್ಯಾರ್ಥಿಗಳ ಪ್ರತಿಭಟನೆ

» ಮೊದಲನೇ ಪುಟದಿಂದ

ಶೈಕ್ಷಣಿಕ ವರ್ಷವು ವ್ಯರ್ಥವಾಗುತ್ತದೆ. ಆದ್ದರಿಂದ ಕಾಲೇಜು, ಬಿಸಿಐ (ಬಾರ್ ಇಂಡಿಯಾ) ಮತ್ತು ಹುಬ್ಬಳ್ಳಿ ವಿಶ್ವವಿದ್ಯಾಲಯದಲ್ಲಾಗಿರುವ ಅವ್ಯವಹಾರಗಳ ಕುರಿತು ತೀವ್ರ ತನಿಖೆ ನಡೆಸಿ ನಮಗೆ ಮುಂದಿನ ಪರೀಕ್ಷೆಗಳನ್ನು ಅವಕಾಶ ಮಾಡಿಕೊಡಬೇಕಾಗಿ ಮನವಿ ಮಾಡಿದರು.

ವಿದ್ಯಾರ್ಥಿಗಳಾದ, ನಿಖಿಲ್, ಭವಿಷ್ಯ, ವರ್ಷಿಣಿ, ಅಭಿಷೇಕ್ ಚಂದನ್, ಪೂರ್ಣೇಶ್, ಅಫ್ಘಾನ್, ಸುಚಿತ್ರ, ರಶ್ಮಿ, ಐಶ್ವರ್ಯ, ಪ್ರಿಯದರ್ಶಿನಿ, ಅಜಯ್ ಕುಮಾರ್ ಇದ್ದರು.

**ಪರೀಕ್ಷೆಗೆ ಅವಕಾಶ**

ಈ ಕುರಿತು ಪ್ರತಿಕ್ರಿಯಿಸಿದ ಕಾಲೇಜಿನ ಪ್ರಾಂಶುಪಾಲ ಥಾಮಸ್, ಬಿಸಿಐನಿಂದ ತಾತ್ಕಾಲಿಕ ಅನುಮತಿ ದೊರೆಯದಿರುವ ಕಾರಣದಿಂದ ಉಂಟಾದ ಗೊಂದಲವಿದು. ಆದರೆ, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಇಂದಿನಿಂದ ಆರಂಭವಾಗಿರುವ ಏಳನೇ ಸೆಮಿಸ್ಟರ್ ಪರೀಕ್ಷೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದೆಂದು ಸ್ಪಷ್ಟಪಡಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ವಿಧಾನಪರಿಷತ್ ಸದಸ್ಯ ಬೋಜೇಗೌಡ ಅವರ ಮೂಲಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡಿದ್ದಾರೆ. ಈ ಹಿನ್ನಲೆ ಬಾರ್ ಕೌನ್ಸಿಲ್ ಕೂಡ ಒಂದು ತಿಂಗಳ ಕಾಲಾವಕಾಶ ನೀಡಿದೆ. ಆ ಅವಧಿಯಲ್ಲಿ ಎಲ್ಲಾ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗುವುದೆಂದು ತಿಳಿಸಿದರು.

ಮಕ್ಕಳ ಹಿತದೃಷ್ಟಿಯಿಂದ ಆಡಳಿತ ಮಂಡಳಿ ಎಲ್ಲಾ ಪ್ರಯತ್ನಗಳನ್ನು ನಡೆಸಿದ್ದು, ಮಂಗಳವಾರದಿಂದ ವಿದ್ಯಾರ್ಥಿಗಳು ಯಾವುದೇ ಅಡಚಣೆ ಇಲ್ಲದೆ ಪರೀಕ್ಷೆಗೆ ಹಾಜರಾಗಲಿದ್ದಾರೆಂದು ಪ್ರಾಂಶುಪಾಲರು ಭರವಸೆ ನೀಡಿದರು.

# ಅಖಾಡಕ್ಕಿಳಿದ ದಳಪತಿಗಳು: ಜಿಲ್ಲಾ ಜೆಡಿಎಸ್‌ನಲ್ಲಿ ಚೈತನ್ಯ

» ಮೊದಲನೇ ಪುಟದಿಂದ

**ಸಮಾವೇಶದ ಹೆಸರು ಪ್ರಕಟ, ಸ್ಥಳ ನಿಗದಿ**

ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೋಮವಾರ ಸಮಾವೇಶದ ಹೆಸರು ಹಾಗು ಸ್ಥಳವನ್ನು ಪ್ರಕಟಿಸುವ ಮೂಲಕ ಪಕ್ಷದ ನಾಯಕರು, ಕಾರ್ಯಕರ್ತರು, ಮುಖಂಡರಿಗೆ ಭಾಗವಹಿಸುವಂತೆ ಕರೆ ನೀಡಿದ್ದಾರೆ.

ಜೆಡಿಎಸ್ ಪಕ್ಷಕ್ಕೆ 25 ವರ್ಷ ತುಂಬಿದ ಹಿನ್ನಲೆ ಇತ್ತೀಚೆಗೆ ಬೆಂಗಳೂರಿನಲ್ಲಿ ಜೆಡಿಎಸ್ ಬೆಳ್ಳಿ ಹಬ್ಬ ಆಚರಿಸಲಾಗಿತ್ತು. ಅದರ ಮುಂದುವರೆದ ಭಾಗವಾಗಿ ಬೆಳ್ಳಿ ಹಬ್ಬದ ಜನತಾ ಸಮಾವೇಶ ಎಂಬ ಹೆಸರಿಟ್ಟಿದ್ದಾರೆ. ಜ.24ರಂದು ನಗರದ ರಾಷ್ಟ್ರೀಯ ಹೆದ್ದಾರಿ-75ಕ್ಕೆ ಹೊಂದಿಕೊಂಡತಿರುವ ಬಿಜಿಎಸ್‌ಕೆ ವಸತಿ ಬಡಾವಣೆಯಲ್ಲಿ ಜನತಾ ಸಮಾವೇಶ ನಡೆಸಲು ಸ್ಥಳ ನಿಗದಿ ಪಡಿಸಲಾಗಿದೆ. ಈ ಹಿಂದೆ ಕೈಗಾರಿಕಾ ಪ್ರದೇಶದಲ್ಲಿ ಸಮಾ ವೇಶ ನಡೆಸಲು ಸ್ಥಳ ನಿಗದಿ ಪಡಿಸ ಲಾಗಿತ್ತು. ಅಲ್ಲಿ ವಿರೋಧ ವ್ಯಕ್ತವಾದ ಹಿನ್ನಲೆ ಬಿಜಿಎಸ್‌ಕೆ ವಸತಿ ಬಡಾವಣೆ ಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

# ಕಾಡಾನೆ-ಮಾನವ ಸಂಘರ್ಷ: 3 ಜಿಲ್ಲೆ ಒಳಗೊಂಡು ಮಹತ್ವದ ಸಭೆ

» ಮೊದಲನೇ ಪುಟದಿಂದ

ಅರಣ್ಯ ಇಲಾಖೆ ನೌಕರರು ಮೃತಪಟ್ಟರೆ 1 ಕೋ.ರೂ. ಪರಿಹಾರ ಘೋಷಿಸಲಾಗುತ್ತದೆ. ಆದರೆ, ರೈತರು ಮೃತಪಟ್ಟರೆ ಕೇವಲ 20 ಲ.ರೂ. ಮಾತ್ರ ನೀಡಲಾಗುತ್ತಿದೆ. ನಾವು ಪರಿಹಾರ ಹೆಚ್ಚಿಸುವುದರಲ್ಲೇ ಸೀಮಿತವಾಗಿದ್ದೇವೆ. ಆದರೆ, ಕಾಡಾನೆ ಸಮಸ್ಯೆಗೆ ಮೂಲ ಪರಿಹಾರ ಕಂಡು ಹಿಡಿಯುವಲ್ಲಿ ಸರ್ಕಾರ ವಿಫಲವಾಗಿದೆ. ಈ ಹಿನ್ನಲೆ ಹೋರಾಟ ಸಮಿತಿ ಯಾವ ತೀರ್ಮಾನ ಕೈಗೊಂಡರೂ ಅದಕ್ಕೆ ನನ್ನ ಸಂಪೂರ್ಣ ಬೆಂಬಲ ಹಾಗು ಸಹಕಾರವಿರುತ್ತದೆ ಎಂದು ತಿಳಿಸಿದರು.

**ಸರ್ಕಾರ ವಾಸ್ತವ ಸ್ಥಿತಿ ಅರಿಯಲಿ**

ಕಾಫಿ ಬೆಳಗಾರರ ಒಕ್ಕೂಟದ ಸುರೇಂದ್ರ, ಕುಮಾರ್ ಅವರು ಮಾತನಾಡಿ, ಇಲ್ಲಿಯವರೆಗೆ ಕೇವಲ ಪ್ರತಿಭಟನೆಗಳು ಮತ್ತು ಪರಿಹಾರ ವಿತರಣೆ ಮಾತ್ರ ನಡೆದಿದೆ. ಶಾಶ್ವತ ಪರಿಹಾರಕ್ಕೆ ಸರ್ಕಾರ ವಾಸ್ತವ ಸ್ಥಿತಿಯನ್ನು ಅರಿತು ಕ್ರಮ ಕೈಗೊಳ್ಳಬೇಕು. ರೈತರು, ಬೆಳೆಗಾರರು ಹಾಗೂ ಸಾರ್ವಜನಿಕರು ತೀವ್ರ ಸಂಕಷ್ಟದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಕಾಡಾನೆ ದಾಳಿಯಿಂದ ಸಂಭವಿಸಿದ ಸಾವು-ನೋವು, ಗಾಯಗಳು ಹಾಗು ಬೆಳೆ ನಷ್ಟದ ವಿವರಗಳನ್ನು ಸಭೆಯ ಗಮನಕ್ಕೆ ತರಲಾಯಿತು. ಜೊತೆಗೆ ಮುಖ್ಯಮಂತ್ರಿ ನಿಧಿಯನ್ನು ಬಳಸಿ ಆನೆಧಾಮ ನಿರ್ಮಾಣಕ್ಕೆ ಅವಕಾಶವಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಹಿನ್ನಲೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮನವೊಲಿಸಿ ಅಗತ್ಯ ಅನುದಾನ ತರುವ ನಿಟ್ಟಿನಲ್ಲಿ ಪಕ್ಷಭೇದ ಮರೆತು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕೆಂದು ನಿರ್ಧರಿಸಲಾಯಿತು.

**ಹೋರಾಟಕ್ಕೆ ಬೆಂಬಲ ಅಗತ್ಯ**

ಹಿರಿಯ ಪತ್ರಕರ್ತ ಆರ್.ಪಿ. ವೆಂಕಟೇಶಮೂರ್ತಿ ಅವರು ಮಾತನಾಡಿ, ಕಳೆದ 30 ವರ್ಷಗಳಿಂದ ಪ್ರತಿಭಟನೆಗಳು, ಪರಿಹಾರ ಹೆಚ್ಚಳದ ಹೋರಾಟಗಳೇ ನಡೆಯುತ್ತಿವೆ. ಈ ಅವಧಿಯಲ್ಲಿ ಅನೇಕ ರೈತರು ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ಸರ್ಕಾರ ಮಾತ್ರ ಶಾಶ್ವತ ಪರಿಹಾರ ಕಂಡು ಹಿಡಿಯುವಲ್ಲಿ ಸಂಪೂರ್ಣ ವಿಫಲವಾಗಿದೆ. ಹಾಸನ, ಚಿಕ್ಕಮಗಳೂರು, ಕೊಡಗು ಭಾಗದ ಎಲ್ಲಾ ಜನಪ್ರತಿನಿಧಿಗಳು ಈ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಮ್ಮಿಗೆ ಮೋಹನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜೆಡಿಎಸ್ ಮುಖಂಡ ಮಂಜೇಗೌಡ, ಮಂಜುನಾಥ ದತ್ತ, ತೋ.ಚ.ಅನಂತ ಸುಬ್ಬರಾಯ, ಬಿ.ಕೆ.ಚಂದ್ರಕಲಾ, ಯಡೇಹಳ್ಳಿ ಮಂಜುನಾಥ್, ಬೆಕ್ಕಿನಹಳ್ಳಿ ನಾಗರಾಜ್, ರವಿ ನಾಕಲಗೂಡು,ಬಿ.ಆರ್.ಉದಯ್ ಕುಮಾರ್, ಎ.ವಿ.ಜಿ.ಕುಮಾರ್, ಪ್ಲಾಂಟೇಶನ್ ಸಂಘದ ಪರಮೇಶ್, ಸಿಐಟಿಯುನ ಧರ್ಮೇಶ್, ಎಂ.ಸಿ.ಡೋಂಗ್ರಿ, ಪರಿಸರವಾದಿ ಕಿಶೋರ್ ಕುಮಾರ್ ಸೇರಿ ಅನೇಕರು ಭಾಗವಹಿಸಿದ್ದರು.

# 80 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ

• ಪ್ರಜೋದಯ ವರದಿ



**ಹಾಸನ:** ಮಹಾನಗರ ಪಾಲಿಕೆ ವ್ಯಾಪ್ತಿಯ 8ನೇ ವಾರ್ಡ್‌ನ ಸಿ.ಎಸ್.ಎ. ಬಡಾವಣೆಯಲ್ಲಿ ಹಲವು ವರ್ಷಗಳಿಂದ ರಸ್ತೆ ಹಾಗು ಚರಂಡಿ ವ್ಯವಸ್ಥೆ ಕೊರತೆಯಿಂದ ನಾಗರಿಕರು ಸಂಕಷ್ಟ ಅನುಭವಿಸುತ್ತಿದ್ದರು. ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ 80 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಪಾಲಿಕೆಯ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾದ ಈ ಕಾಮಗಾರಿಗೆ ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ ಅವರ ಮಹತ್ವದ ಸಹಕಾರ ದೊರೆತಿದೆ. 80 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಲೇಔಟ್‌ನ ಎಲ್ಲಾ ನಿವಾಸಿಗಳಿಗೆ ಇದು ಬಹು ಉಪ ಯುಕ್ತವಾಗಲಿದೆ. ಹಲವು ವರ್ಷಗಳಿಂದಲೂ ಈ ಕಾಮಗಾರಿಗೆ ಬೇಡಿಕೆ ಇದ್ದು, ಇದೀಗ ನೆರವೇರುತ್ತಿರುವುದು ಸಂತಸದ ಸಂಗತಿ. ಗುತ್ತಿಗೆದಾರರು ಗುಣಮಟ್ಟದ ಕೆಲಸ ನಿರ್ವಹಿಸಿ ಕಾಮಗಾರಿ ಶೀಘ್ರ ಆರಂಭಿಸಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ ಅವರು ಮಾತನಾಡಿ, ಸಿ.ಎಸ್.ಎ. ಲೇಔಟ್‌ನಲ್ಲಿ ಮೂಲ ಭೂತ ಸೌಕರ್ಯಗಳಾದ ರಸ್ತೆ ಹಾಗು ಚರಂಡಿ ಕಾಮಗಾರಿ ಬಹಳ ವರ್ಷಗಳ ಹಳೆಯ ಬೇಡಿಕೆಯಾಗಿತ್ತು. ಕಳೆದ ಒಂದು ವರ್ಷದ ನಿರಂತರ ಪ್ರಯತ್ನದ ಫಲವಾಗಿ, ಶಾಸಕರ ಸಲಹೆ ಹಾಗೂ ನಿವಾಸಿಗಳ ಬೇಡಿಕೆಯ ಮೇರೆಗೆ ಮಹಾನಗರ ಪಾಲಿಕೆಯ 80 ಲಕ್ಷ ರೂ. ಅನುದಾನದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಾಮಗಾರಿ ಶೀಘ್ರ ಮುಗಿದು ಸಾರ್ವಜನಿಕರ ಉಪಯೋಗಕ್ಕೆ ಬರಲಿ ಎಂದು ಅವರು ಹಾರೈಸಿದರು. ವಿಷ್ಣು ಸೇನೆ ಜಿಲ್ಲಾಧ್ಯಕ್ಷ ಮಹಂತೇಶ್, ಸ್ಥಳೀಯ ಮುಖಂಡರು, ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.

# ಬಜೆಟ್ ಪೂರ್ವ ಸಭೆಯಲ್ಲಿ ಸಮಸ್ಯೆ ಅನಾವರಣ

## ಮೂಲಸೌಕರ್ಯ ಕಲ್ಪಿಸಲು ಒತ್ತಾಯ : ವಲಸಿಗರ ಅಕ್ರಮ ಶೆಡ್ ತೆರವಿಗೆ ಆಗ್ರಹ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕು ಕ್ರೀಡಾಂಗಣದ ಅಭಿವೃದ್ಧಿ, ಹಳೆ ತಾಲ್ಲೂಕು ಕಚೇರಿ ಪಾರಂಪರಿಕ ಕಟ್ಟಡದ ಸಂರಕ್ಷಣೆ, ಕಸ ವಿಲೇವಾರಿ, ವಾಣಿಜ್ಯ ಮಳಿಗೆಗಳ ಸಮಸ್ಯೆ, ಬೀದಿ ನಾಯಿಗಳು ಹಾಗು ಬಿಡಾಡಿ ದನಗಳ ಸಮಸ್ಯೆ ಸೇರಿ ಅನೇಕ ಸಮಸ್ಯೆಗಳು ಪಟ್ಟಣ ಪಂಚಾಯಿತಿ ಬಜೆಟ್ ಪೂರ್ವ ಸಭೆಯಲ್ಲಿ ಚರ್ಚೆಯಾದವು.

ಶಾಸಕ ಎ.ಮಂಜು ಅವರ ಸಮ್ಮುಖದಲ್ಲಿ ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ, ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ 2026-27ನೇ ಸಾಲಿನ ಬಜೆಟ್ ಪೂರ್ವ ಸಭೆಯಲ್ಲಿ ಪಟ್ಟಣದ ಅಭಿವೃದ್ಧಿ, ಮೂಲಭೂತ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಸಭೆ ಯಲ್ಲಿ ಸಾರ್ವಜನಿಕ ವಲಯದಿಂದ ವ್ಯಕ್ತ ವಾದ ಸಮಸ್ಯೆಗಳು ಅಚ್ಚರಿ ಮೂಡಿಸು ವಂತಿದ್ದವು. ಪಟ್ಟಣದಲ್ಲಿ ಪ್ರತಿದಿನ ವಲಸಿಗ ಕೂಲಿ ಕಾರ್ಮಿಕರು ಕಾಣಿಸಿ ಕೊಳ್ಳುತ್ತಿದ್ದು, ಅವರು ಸಿಕ್ಕಸಿಕ್ಕಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡಿರುವುದು ಕಂಡು ಬಂದಿದೆ ಎಂದು ನಿವಾಸಿಗಳು ಗಮನ ಸೆಳೆದರು. ಅದಕ್ಕೆ ಪ್ರತಿ ಕ್ರಿಯಿಸಿದ ಶಾಸಕರು, ನಿಯಮ ಬಾಹಿರವಾಗಿ ಯಾರೇ ಶೆಡ್ ನಿರ್ಮಿಸಿ ಕೊಂಡವರಾಗಲಿ ಅಥವಾ ನಿರ್ಮಿಸಿ ಕೊಟ್ಟವರಾಗಲಿ ಇಬ್ಬರ ಮೇಲೂ ಕ್ರಮ ಜರುಗಿಸುವಂತೆ ಅಧಿಕಾರಿ ಗಳಿಗೆ ಸೂಚನೆ ನೀಡಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಮಾತನಾಡಿ, ಕಳೆದ ವರ್ಷ ಉಳಿತಾಯ ಬಜೆಟ್ ನಿರೀಕ್ಷಿಸಲಾ ಗಿದ್ದರೂ ನಿರೀಕ್ಷಿತ ಮಟ್ಟದ ಉಳಿತಾ ಯವಾಗದೆ ಕೊರತೆ ಎದುರಾಗಿದೆ. ಅದರ ಪರಿ ಣಾಮವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅಡ ಚಣೆ ಉಂಟಾಗಿದೆ. ಸಾರ್ವಜನಿಕರ ಸಹಕಾರದಿಂದ ಮಾತ್ರ ಪಟ್ಟಣದ ಅಭಿವೃದ್ಧಿ ಸಾಧ್ಯವೆಂದು ತಿಳಿಸಿದರು.

ಶಾಸಕ ಎ.ಮಂಜು ಅವರು ಮಾತನಾಡಿ, ಪಟ್ಟಣದಲ್ಲಿ ಅತ್ಯಗತ್ಯವಾಗಿರುವ ಒಳಚರಂಡಿ ಕಾಮಗಾರಿಯನ್ನು 2026ರೊಳಗೆ ಪೂರ್ಣಗೊಳಿಸಲಾಗುವುದು. ಅದಕ್ಕಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಅರಕಲಗೂಡು ಪಟ್ಟಣವೇ ತಮ್ಮ ರಾಜಕೀಯ ಶಕ್ತಿಯ ಮೂಲವೆಂಬ ಅರಿವು ಸದಾ ತಮ್ಮಲ್ಲಿದೆ ಎಂದು ಹೇಳಿದ ಅವರು, ಮನೆ ಇಲ್ಲದವರಿಗೆ ಸೂರು ಕಲ್ಪಿಸುವ ನಿಟ್ಟಿನಲ್ಲಿ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು. ಕ್ರೀಡಾಂಗಣ ಹಾಗೂ ಉದ್ಯಾನವನಗಳು ಇಂದಿನ ಅಗತ್ಯವಾಗಿದ್ದು, ಅವುಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಮಾಜಿ ಅಧ್ಯಕ್ಷ ಮಂಜುಶೆಟ್ಟಿಗೌಡ, ಕೃಷ್ಣಯ್ಯ, ಹೂವಣ್ಣ, ಮಾಜಿ ಉಪಾ ಧ್ಯಕ್ಷರಾದ ರಶ್ಮಿ ಪ್ರವೀಣ್, ಎಸ್.ವೈ.ರವಿಕುಮಾರ್, ಅಲೀಂ, ಮುತಾ ಹಿರ್, ಪತ್ರಕರ್ತರಾದ ಶಂಕರ್, ವಿರೂಪಾಕ್ಷ, ಪತ್ರಕರ್ತರ ಸಂಘದ ಕಾರ್ಯದರ್ಶಿ ಗಣೇಶ್ ಶೆಟ್ಟಿ, ಬಸವರಾಜ್, ಗಣೇಶ್ ವೇಲಾಪುರಿ ಇದ್ದರು.

# ಕಾಬೂಲ್‌ನಲ್ಲಿ ಸ್ಫೋಟ, ಹಲವರು ಸಾವು



• ಪ್ರಜೋದಯ ವರದಿ

**ಕಾಬೂಲ್:** ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನ ಶಹರ್-ಎ-ನಾವ್ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದ್ದು, ಅನೇಕರು ಸಾವಿಗೀಡಾಗಿದ್ದಾರೆಂದು ತಾಲಿಬಾನ್ ಆಂತರಿಕ ಸಚಿವಾಲಯ ಸೋಮವಾರ ತಿಳಿಸಿದೆ.

ಪ್ರಾಥಮಿಕ ವರದಿಗಳ ಪ್ರಕಾರ, ಹಲವರು ಸಾವಿಗೀಡಾಗಿದ್ದಾರೆ ಹಾಗೂ ಅನೇಕರು ಗಾಯ ಗೊಂಡಿದ್ದಾರೆಂದು ಆಂತರಿಕ ಸಚಿವಾಲಯದ ವಕ್ತಾರ ಅಬ್ದುಲ್ ಮತೀನ್ ಖಾನಿ ಮಾಹಿತಿ ನೀಡಿದ್ದಾರೆ. ಸತ್ತವರ ಹಾಗೂ ಗಾಯಾಳುಗಳ ವಿವರಗಳು ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಶಹರ್-ಎ-ನೌಪ್ರದೇಶದಲ್ಲಿ ಹೆಚ್ಚಾಗಿ ವಿದೇಶಿಗರು ನೆಲೆಸಿದ್ದು, ಕಾಬೂಲ್‌ನ ಅತ್ಯಂತ ಸುರಕ್ಷಿತ ಪ್ರದೇಶಗಳಲ್ಲಿಒಂದುಎಂದು ಪರಿಗಣಿಸಲಾಗಿದೆ.

# ಬ್ಯಾಂಕ್‌ನಿಂದ ಪಡೆದ ಸಾಲದಿಂದ ಆರ್ಥಿಕವಾಗಿ ಶಕ್ತರಾಗಬೇಕು

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮಹಿಳಾ ಸ್ವ-ಸಹಾಯ ಸಂಘಗಳು ಬ್ಯಾಂಕ್‌ಗಳಿಂದ ಪಡೆದ ಸಾಲ ಸೌಲಭ್ಯವನ್ನು ಸೂಕ್ತವಾಗಿ ಸದ್ಬಳಕೆ ಮಾಡಿಕೊಂಡು ಆರ್ಥಿಕ ಪ್ರಗತಿ ಸಾಧಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೋಮವಾರ ಮಹಿಳಾ ಮಿತ್ರ ಚಾರಿ ಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಕೆನರಾ ಬ್ಯಾಂಕ್ ವತಿಯಿಂದ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಚೆಕ್ ವಿತರಿಸಿ ಮಾತನಾಡಿದ ಅವರು, ಮಹಿಳಾ ಮಿತ್ರ ಚಾರಿ ಟೇಬಲ್ ಟ್ರಸ್ಟ್ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಉದ್ಯಮಶೀಲತೆಯ ಚಟುವಟಿಕೆಗಳನ್ನು ಉತ್ತೇಜಿಸಲು ಗ್ರಾಮೀಣ ಮಹಿಳೆಯರಿಗಾಗಿ ರೂಪಿಸಿದ ಯೋಜನೆ ಇದಾಗಿದೆ. ಈ ಮೂಲಕ ಸಂಘದ ಸದಸ್ಯರು ತಮ್ಮ ಜೀವನ ನಿರ್ವಹಣೆಯಲ್ಲಿ ಸುಧಾರಣೆ ಕಾಣಬಹುದು. ಮಹಿಳಾ ಸಮುದಾಯ ಸಬಲವಾದರೆ ದೇಶದ ಪ್ರಗತಿ ಸಾಧ್ಯವಾಗಲಿದೆ. ಸ್ವ-ಸಹಾಯ ಸಂಘಗಳ ಮೂಲಕ ಮಹಿಳೆಯರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಸಮಾಜದ ಮುಖ್ಯ ವಾಹಿನಿಗೆ ಬಂದಿರುವುದು ಉತ್ತಮ ಬೆಳವಣಿಗೆ ಎಂದರು.

ಮುಂದಿನ ದಿನಗಳಲ್ಲಿ ಸ್ವ-ಸಹಾಯ ಸಂಘಗಳು ಮತ್ತಷ್ಟು ಹೆಚ್ಚಿನ ಉಳಿತಾಯವನ್ನು ಮಾಡಿ ಕುಟುಂಬ ನಿರ್ವಹಣೆಯ ಜೊತೆಗೆ ಇನ್ನುಳಿದ ಮಹಿಳೆಯರಿಗೆ ಪ್ರೇರಣೆಯಾಗಬೇಕು. ಆರ್ಥಿಕ ಚಟುವಟಿಕೆಯ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಪಡೆದ ಸಾಲವನ್ನು ಸ್ವ-ಉದ್ಯೋಗಕ್ಕೆ ಬಳಸುವುದರ ಮೂಲಕ ಆರ್ಥಿಕವಾಗಿ ಸಶಕ್ತರಾಗಬೇಕು. ಸಾಲ ಪಡೆಯುವ ಮುಂಚೆ ಅದಕ್ಕೆ ಸ್ಪಷ್ಟ ಉದ್ದೇಶ, ನಿಗದಿತ ಗುರಿ ಇಟ್ಟುಕೊಳ್ಳಬೇಕು. ವಿಶ್ವಾಸ, ನಂಬಿಕೆಯಿಂದ ಸ್ವ-ಸಹಾಯ ಸಂಘಗಳಿಗೆ ಸಾಲ ಸಿಗುತ್ತದೆ, ಅದರ ಪ್ರಯೋಜ ನವನ್ನು ಭವಿಷ್ಯದ ಉನ್ನತಿಗಾಗಿ ಬಳಸಿಕೊಳ್ಳಲು ಮುಂದಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 10 ಸ್ವ-ಸಹಾಯ ಸಂಘಗಳಿಗೆ ತಲಾ 8 ಲಕ್ಷ ರೂ. ನಂತೆ 80 ಲಕ್ಷ ರೂ.ಗಳ ಸಾಲದ ಚೆಕ್‌ನ್ನು ನೀಡಲಾಯಿತು. ಕೆನರಾ ಬ್ಯಾಂಕ್ ಹಾಸನದ ಪ್ರಾದೇಶಿಕ ಕಚೇರಿಯ ಪ್ರಬಂಧಕ ಮಹೇಂದರ್ ಜಂಬಲ್ಕರ್ ಅವರನ್ನು ಸನ್ಮಾನಿಸಲಾಯಿತು.

ವ್ಯವಸ್ಥಾಪಕಿ ಡೆಲ್ನಾ ಜೋಸ್, ಪಟ್ಟಣ ಶಾಖೆಯ ವ್ಯವಸ್ಥಾಪಕ ದೀಪ್ತಿ ರಂಜನ್ ಜೆನಾ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎನ್.ದೊರೆಸ್ವಾಮಿ ನುಗ್ಗೇಹಳ್ಳಿ, ಮಹಿಳಾ ಮಿತ್ರ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷೆ ಚಂದನಾಆನಂದ್, ಕಾರ್ಯಾಧ್ಯಕ್ಷ ಆನಂದ್ ಚನ್ನೇನಹಳ್ಳಿ, ಸಿಇಓ ಸೌಜನ್ಯ ಬಿನಯ್, ಮುಖಂಡರಾದ ರೇವಣ್ಣ, ಮಂಜುನಾಥ ಸ್ವಾಮಿ ನಾಗರಾಜು ಸಂಪತ್‌ಕುಮಾರ್, ಹೊನ್ನೇಗೌಡ, ಮಹಿಳಾ ಮಿತ್ರ ಸಿಂಬದಿ ವರ್ಗದವರು, ಕೆನರಾ ಬ್ಯಾಂಕ್ ಕೃಷಿ ವಿಭಾಗದ ಕಚೇರಿ ಅಧಿಕಾರಿಗಳು ಇತರರು ಹಾಜರಿದ್ದರು.

## ಅರಸೀಕೆರೆಯಲ್ಲಿ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ

# ಕ್ರೀಡೆಗೆ ಗಡಿ ಎಂಬುದಿಲ್ಲ: ಶಿವಾನಂದ ತಗಡೂರು

• ಪ್ರಜೋದಯ ವರದಿ



**ಅರಸೀಕೆರೆ:** ಕ್ರೀಡೆಗೆ ಗಡಿಯೆಂಬುದಿಲ್ಲ ಜಾತಿ, ಧರ್ಮ, ಮೇಲು-ಕೀಳು ಇವುಗಳನ್ನು ದೂರ ಮಾಡಿ ಸ್ನೇಹದ ಸಂಕೋಲೆಯನ್ನು ಬಲಗೊಳಿಸುವುದೇ ಕ್ರೀಡೆ ಎಂದು ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ಹೇಳಿದರು.

ಗಣರಾಜ್ಯೋತ್ಸವದ ಅಂಗವಾಗಿ ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನಡುವೆ ನಡೆದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಗೆ ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಸದಾ ಒತ್ತಡದಲ್ಲೇ ಕಾರ್ಯ ನಿರ್ವಹಿಸುವ ಕಂದಾಯ ಇಲಾಖೆಯ ಸಿಬ್ಬಂದಿ ಹಾಗೂ ಪತ್ರಕರ್ತರು ಬಿಡುವು ಮಾಡಿಕೊಂಡು ಕ್ರಿಕೆಟ್ ಆಡುತ್ತಿರುವುದು ಸಂತಸದ ವಿಷಯ. ಇದು ಇತರರಿಗೂ ಮಾದರಿಯಾಗಲಿ ಎಂದು ಕರೆ ನೀಡಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ಸಂಘದ ಸಂಘಟನೆಯ ಜೊತೆಗೆ ಪತ್ರಕರ್ತರ ನೋವು-ನಲಿವಿಗೆ ಸ್ಪಂದಿಸುತ್ತಾ ಸಮಾಜಮುಖಿ ಚಟುವಟಿಕೆಗಳಿಗೂ ಕೈಜೋಡಿಸುತ್ತಾ ಕಲೆ, ಸಾಹಿತ್ಯಕ್ಕೆ ಪ್ರೋತ್ಸಾಹ ಪರಿಸರ ರಕ್ಷಣೆ ಕುರಿತು ಜಾಗೃತಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ಹೀಗೆ ಪತ್ರಕರ್ತರ ಸಹಭಾಗಿತ್ವವನ್ನು ಪ್ರೋತ್ಸಾಹಿಸಲಾಗುತ್ತಿದೆಂದು ಹೇಳಿದರು.

ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಮಾತನಾಡಿ, ಪತ್ರಕರ್ತರ ರಾಜ್ಯ ಮಟ್ಟದ ಕ್ರಿಕೆಟ್ ಕ್ರೀಡಾಕೂಟವನ್ನು ಅರಸೀಕೆರೆಯಲ್ಲಿ ಆಯೋಜಿಸಿದರೆ ರಾಜ್ಯ ಸಂಘದ ವತಿಯಿಂದ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಅವರು ಮಾತನಾಡಿ, ಕ್ರೀಡಾಕೂಟದಲ್ಲಿ ಸೋಲು- ಗೆಲುವು ಮುಖ್ಯವಲ್ಲ ಪಾಲ್ಗೊಳ್ಳುವುದು ಮುಖ್ಯ. ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಪ್ರತಿಯೊಬ್ಬರು ತಮ್ಮ ದಿನಚರಿಯ ಒಂದೆರಡು ಗಂಟೆಯಾದರೂ ಯೋಗ, ವ್ಯಾಯಾಮ ಅಥವಾ ತಮ್ಮ ನೆಚ್ಚಿನ ಯಾವುದಾದರೂ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಹವ್ಯಾಸ ಬೆಳೆಸಿಕೊಂಡರೆ ದೈಹಿಕವಾಗಿ ಸದೃಢರಾಗುವ ಜೊತೆಗೆ ಮಾನಸಿಕವಾಗಿಯೂ ದೃಢತೆ ಸಾಧಿಸಲು ಸಾಧ್ಯವಾಗಲಿದೆ ಎಂದು ಹೇಳಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ಆನಂದ್, ಮಾಜಿ ಅಧ್ಯಕ್ಷರಾದ ರಾಮಚಂದ್ರ, ಕಣಕಟ್ಟೆ ಕುಮಾರ್, ಗ್ರಾಮ ಲೆಕ್ಕಿ ಆಡಳಿತ ಅಧಿಕಾರಿ ಶಿವಾನಂದ ನಾಯ್ಕ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಖಜಾಂಚಿ ಪ್ರಕಾಶ್, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೇಮಂತ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಹಾಮೂಲ್‌ನಿಂದ ಕುಲುಷಿತ ನೀರು: ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಹಾಸನ ಹಾಲು ಒಕ್ಕೂಟದಿಂದ ಪ್ರತಿದಿನ ಹೊರ ಸೂಸಲಾಗುತ್ತಿರುವ ಕುಲುಷಿತ ನೀರು ಸುತ್ತಮುತ್ತಲಿನ ಗ್ರಾಮಗಳಿಗೆ ಹರಿದು ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ಕೆಆರ್‌ಎಸ್ ಪಕ್ಷದಿಂದ ಸೋಮವಾರ ಪ್ರತಿಭಟನೆ ನಡೆಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಈ ವೇಳೆ ಮಾತನಾಡಿದ ಪ್ರತಿ ಭಟನಾಕಾರರು, ರೈಲ್ವೆ ಜಾಗದ ಮೂಲಕ ಹರಿಯುತ್ತಿರುವ ಈ ಗಲೀಜು ನೀರು ಸರ್ವೆ ನಂ. 51ರ ಪ್ರದೇಶವನ್ನು ಸಂಪೂರ್ಣವಾಗಿ ಕಲುಷಿತಗೊಳಿಸಿದೆ. ಗವೇನಹಳ್ಳಿ, ಆಡುವಳ್ಳಿ ಗ್ರಾಮಗಳ ಗದ್ದೆಗಳಲ್ಲಿ ನೀರು ನಿಂತಿದೆ. ಅದರಿಂದ ಕೃಷಿ ಹಾಗು ಪರಿಸರಕ್ಕೆ ಹಾನಿ ಉಂಟಾಗಿದ್ದು, ಜಲಚರ ಜೀವಿಗಳಿಗೆ ಈ ನೀರು ಅಪಾಯಕಾರಿಯಾಗಿದೆ ಎಂದು ದೂರಿದರು.

ಗ್ರಾಮಗಳ ಮನೆಗಳ ಪಕ್ಕದಲ್ಲೇ ಕಲುಷಿತನೀರು ಕೆರೆಯಂತೆ ನಿಂತಿರುವುದರಿಂದ ದುರ್ವಾಸನೆ, ಸೊಳ್ಳೆ-ನೊಣಗಳ ಹೆಚ್ಚಳವಾಗಿವೆ. ಮಕ್ಕಳು, ವೃದ್ಧರು ಸೇರಿ ಅನೇಕರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಅದರಿಂದ ಗ್ರಾಮಸ್ಥರ ದಿನನಿತ್ಯದ ಜೀವನ ಅಸ್ತವ್ಯಸ್ತಗೊಂಡಿದೆ ಎಂದು ಹೇಳಿದರು.

ಈ ಬಗ್ಗೆ ಸಣ್ಣ ಕೆರೆ ನೀರಾವರಿ ನಿಗಮ ಮಂಡಳಿ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಸೇರಿಸಂಬಂಧಪಟ್ಟ ಎಲ್ಲಾ ಇಲಾಖೆಗಳು ತಕ್ಷಣ ಕ್ರಮ ಕೈ ಗೊಳ್ಳಬೇಕು. ಕೆರೆಗಳ ಸಮಗ್ರ ಅಭಿ ವೃದ್ಧಿ ಹಾಗು ಶಾಶ್ವತ ಪರಿಹಾರಕ್ಕಾಗಿ ರಾಜಕಾಲುವೆ ನಿರ್ಮಾ ಣವನ್ನು ತ್ವರಿತ ವಾಗಿ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಧು ಚಿಟ್ಟನಹಳ್ಳಿ, ತಾಲ್ಲೂಕು ಅಧ್ಯಕ್ಷ ನಿರಂಜನ, ಉಪಾಧ್ಯಕ್ಷ ಜಗದೀಶ್ ರಾಜಘಟ್ಟ, ರೂಪ, ನಾಸಿರ್ ಮುನ್ನ, ದೇವರಾಜೇಗೌಡ ಸೇರಿ ಇತರರು ಉಪಸ್ಥಿತರಿದ್ದರು.

## ರಂಗನಾಥಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ರಾಸುಗಳಿಗೆ ಬಹುಮಾನ

# ದೇಶಿಯ ತಳಿಗಳ ಅಭಿವೃದ್ಧಿಗೆ ಆದ್ಯತೆ ನೀಡಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ದೇಶಿಯ ತಳಿಗಳ ಸಂತಾನೋತ್ಪತ್ತಿಯೊಂದಿಗೆ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀ ಕ್ಷೇತ್ರ ಬೂಕನಬೆಟ್ಟದ ಶ್ರೀ ರಂಗನಾಥಸ್ವಾಮಿಯ ಜಾತ್ರಾ ಮಹೋತ್ಸವದಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ಹಳ್ಳಿಕಾರ್ ತಳಿಯ ಎತ್ತುಗಳಿಗೆ ಒಳ್ಳೆಯ ಬೇಡಿಕೆ ಇದೆ ಎಂದರು.

ಮೊದಲೆಲ್ಲ ಕೃಷಿ ಚಟುವಟಿಕೆಯಲ್ಲಿ ಜಾನುವಾರುಗಳ ಬಳಕೆ ಹೆಚ್ಚಾಗಿತ್ತು. ಆಧುನಿಕ ಯಂತ್ರೋಪಕರಣಗಳು ಬಳಕೆಗೆ ಬಂದ ಮೇಲೆ ನಾಟಿ ಅಥವಾ ದೇಶಿಯ ತಳಿ ಜಾನುವಾರುಗಳ ಸಂಖ್ಯೆ ಕ್ಷೀಣಿಸುತ್ತಿದೆಂದು ಆತಂಕ ವ್ಯಕ್ತಪಡಿಸಿದರು.

ಬೂಕನಬೆಟ್ಟದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಈಗಾಗಲೇ ಬೆಟ್ಟದ ಮೇಲಿನ ಕಾಂಪೌಂಡ್ ನಿರ್ಮಾಣ, ಬೆಟ್ಟದ ರಸ್ತೆಗೆ ಕಾಂಕ್ರೀಟ್ ವ್ಯವಸ್ಥೆ, ಹಿರೀಸಾವೆ, ಸೋರೆಕಾಯಿಪುರ, ದಿಡ್ಡಮ್ಮನ ಗುಡಿ ಹಾಗೂ ರಾಷ್ಟ್ರೀಯ ಹೆದ್ದಾರಿಯಿಂದ ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆ ಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ಒದಗಿಸಿ ಮತ್ತಷ್ಟು ಅಭಿವೃದ್ಧಿಗೊಳಿಸಲಾಗುವುದೆಂದು ಭರವಸೆ ನೀಡಿದರು.

ಜಾತ್ರೆಗೆ ಸಾವಿರಾರು ಸಂಖ್ಯೆಯಲ್ಲಿ ಜನ-ಜಾನುವಾರುಗಳು ಆಗಮಿಸುವುದರಿಂದ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ ಸೇರಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಶೆಟ್ಟಿಹಳ್ಳಿ ಡೈರಿಯಿಂದ 25 ಸಾವಿರ ಲೀಟರ್ ಸಾಮರ್ಥ್ಯವಿರುವ ಟ್ಯಾಂಕರ್ ಮೂಲಕ ಪ್ರತಿದಿನ ನೀರಿನ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿಸಿದರು.

ಬೂಕನಬೆಟ್ಟದ ತಪ್ಪಲಲ್ಲಿ ಪೂರ್ವಕಾಲದಿಂದ ಸಂತೆ ನಡೆಯುತ್ತಿದ್ದು, ಇತ್ತೀಚಿನ ವರ್ಷಗಳಿಂದ ನಿಂತು ಹೋಗಿತ್ತು. ಕಳೆದ ವರ್ಷದಿಂದ ಹೊಸದಾಗಿ ಸಂತೆ ಪ್ರಾರಂಭಗೊಳಸಲಾಗಿದೆ. ಎರಡು ಪ್ರಹಂಗಣ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಜಾತ್ರಾ ಮಹೋತ್ಸವದ ಹಿನ್ನಲೆ ಸಂಪ್ರದಾಯದಂತೆ ಆಯ್ಕೆ ಮಾಡಿರುವ 18 ಜೊತೆ ರಾಸು ಗಳಿಗೆ ಬಹುಮಾನವಾಗಿ 1.2 ಗ್ರಾಂ ಚಿನ್ನ ಹಾಗೂ 5 ಸಾವಿರ ರೂ. ನಗದನ್ನು ಶಾಸಕ ಸಿ.ಎನ್. ಬಾಲಕೃಷ್ಣ ಅವರು ವಿತರಿಸಿದರು. ಗ್ರಾಮೀಣ ಕ್ರೀಡಾಕೂಟದಲ್ಲಿ ಗೆಲುವು ಸಾಧಿಸಿದ್ದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಜೊತೆಗೆ 5 ಜೋಡಿ ಎತ್ತುಗಳಿಗೆ ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಅವರ ವತಿಯಿಂದ ತಲಾ 3 ಸಾವಿರ ರೂ. ನಗದು ನೀಡಲಾಯಿತು. ಕೋಲಾಟ ಪ್ರದರ್ಶನ ಮಾಡಿದ ಮಹಿಳಾ ತಂಡವನ್ನು ಶಾಸಕರು ಅಭಿನಂದಿಸಿದರು.

ತಹಶೀಲ್ದಾರ್ ಶಂಕರಪ್ಪ, ಉಪ ತಹಶೀಲ್ದಾರ್ ರವಿ, ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಹೆಚ್.ಜಿ. ರಾಮಕೃಷ್ಣ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿ.ಎನ್.ಮಂಜುನಾಥ್, ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ತೋಟಿ ಜಯರಾಂ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಸಿ. ದೊರೆಸ್ವಾಮಿ, ಉದ್ಯಮಿ ಅಣತಿ ಯೋಗೇಶ್, ಎಪಿಎಂಸಿ ಕಾರ್ಯದರ್ಶಿ ಸೋಮಶೇಖರ್, ಅಧಿಕಾರಿ ಜ್ಯೋತಿ, ಡಿವೈಎಸ್ಪಿ ಕುಮಾರ್, ಪಿಎಸ್‌ಐ ಮಂಜುನಾಥ್, ಆರ್‌ಐ ಯೋಗೇಶ್, ಪಿಡಿಓ ಸತೀಶ್, ದೇವಸ್ಥಾನದ ಪಾರುಪತ್ತೆದಾರ ರಂಗರಾಜ್ ಹಾಗೂ ಇತರರು ಇದ್ದರು.

# ಜ.20ರಿಂದ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟ

• ಪ್ರಜೋದಯ ವರದಿ

**ಲೇಹ್ (ಲಡಾಕ್):** 2026ರ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟವು ಲಡಾಖ್‌ನ ಲೇಹ್‌ನಲ್ಲಿ ಮಂಗಳವಾರ ಆರಂಭ ವಾಗಲಿದ್ದು, ಒಂದು ಸಾವಿರಕ್ಕೂ ಹೆಚ್ಚು ಕ್ರೀಡಾ ಪಟುಗಳು ಸ್ಪರ್ಧಾಕಣದಲ್ಲಿದ್ದಾರೆ.

ಇಲ್ಲಿನ ನವಾಂಗ್‌ದೋರ್ಜನ್ ಸ್ಟೊಬ್ಡಾನ್ ಕ್ರೀಡಾಂಗಣ, ಸೇನಾ ಮೈದಾನ ಮತ್ತು ಹೆಪ್ಪುಗಟ್ಟಿದ ಗುಪುಖ್ ಕೊಳವು ಕ್ರೀಡಾಕೂಟದ ಆಕರ್ಷಣೆಯ ಕೇಂದ್ರಗಳಾಗಿವೆ. ಜ. 26ರವರೆಗೆ ಕೂಟ ನಡೆಯಲಿದೆ.

ಮಂಜುಗಡ್ಡೆ ಮೇಲೆ ನಡೆಯುವ ಹಾಕಿ ಮತ್ತು ಸ್ಕೇಟಿಂಗ್ ಕ್ರೀಡೆಯಲ್ಲಿ 472 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಈ ವರ್ಷದ ಆಕರ್ಷಣೆಯೆಂದರೆ ಒಲಿಂಪಿಕ್ ಕ್ರೀಡೆ ಫಿಗರ್ ಸ್ಕೇಟಿಂಗ್ ಅನ್ನು ಪರಿಚಯಿಸಲಾಗಿದೆ.

ಕಳೆದ ವರ್ಷವೂ ಇದೇ ತಾಣದಲ್ಲಿ ಕೂಟ ನಡೆದಿದ್ದು, ಆತಿಥೇಯ ತಂಡವು 13 ಚಿನ್ನದ ಪದಕಗಳಲ್ಲಿ ನಾಲ್ಕು ಅನ್ನು ಗೆದ್ದು ಪದಕ ಪಟ್ಟಿಯಲ್ಲಿಅಗ್ರಸ್ಥಾನಗಳಿಸಿದ್ದರು.ತಮಿಳುನಾಡು ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ 2ನೇ ಮತ್ತು 3ನೇ ಸ್ಥಾನಗಳನ್ನು ಗಳಿಸಿದ್ದವು.

ಈ ಕೂಟವು ಖೇಲೊ ಇಂಡಿಯಾ ಕ್ಯಾಲೆಂಡರ್‌ನ ಎರಡನೇ ಕಾರ್ಯಕ್ರಮವಾಗಿದೆ. ದಿಯುನಲ್ಲಿ ಈಚೆಗೆ ನಡೆದ ಬೀಚ್ ಗೇಮ್ಸ್ ಕ್ಯಾಲೆಂಡರ್‌ನ ಮೊದಲ ಕಾರ್ಯಕ್ರಮವಾಗಿತ್ತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK